ಏಪ್ರಿಲ್ 22–28, 1984 ರೂ. 1–50

ತರಂಗ






ಆನಂದವನದ 'ಸದ್ಬೋಧಚಂದ್ರಿಕೆ'ಯ ಅಮೃತೋತ್ಸವ


◁ ಗಳಗನಾಥರು

"ಚಿತ್ರಕಲೆಯಲ್ಲಿ ಭಾರತೀಯತ್ವ ಎಂಬ ಮಾತು ಹುರುಳಿಲ್ಲದ್ದು"



ಕೆ.ಕೆ.ಹೆಬ್ಬಾರ್





ಪೊಲೀಸ್ ಆದರ್ಶ


ಅಂದು ಇಂದು


ಭವ್ಯ ಆಗಮನ!
ಭಾರತದ ಪ್ರಥಮ 'ಮಾಯಿಶ್ಚರ್
ಬ್ಯಾಲೆನ್ಸ್‌ಡ್' ಸಾಬೂನು.
ಕ್ಲಿಯರ್·ಟೋನ್
ತ್ವಚಾ ಸಂರಕ್ಷಣ ಸಾಬೂನು
ಶುಷ್ಕವಾಗಿರದ ಸ್ವಚ್ಛತೆ,
ಎಣ್ಣೆಪಸೆಯಿಲ್ಲದ ಕೋಮಲತೆಗಾಗಿ.
daCunha/CLS/6/84/KN
ವೈಶಿಷ್ಟ್ಯಪೂರ್ಣ ಫ್ರೆಂಚ್ ಸುಗಂಧದಿಂದ ಸಮೃದ್ಧ.
Clear·tone skin care soap
Cleartone
ಕ್ಲಿಯರ್·ಟೋನ್‌ನಲ್ಲಿ ವಿಶೇಷ ಘಟಕಗಳಿವೆ. ಇವು ನಿಮ್ಮ ತ್ವಚೆಯನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಲು ಮತ್ತು ಮೃದುಗೊಳಿಸಲು ವೈಜ್ಞಾನಿಕವಾಗಿ ಸಂತುಲಿತವಾಗಿವೆ. ಕ್ಲಿಯರ್·ಟೋನ್ ಸಾಬೂನಿನಲ್ಲಿ ವಿಶಿಷ್ಟವಾದುದು ಅದರ ಸುಪ್ರಸಿದ್ಧ ಆರ್ದ್ರತಾಕಾರಕ. ಅದರ ಅತಿ ಮುಖ್ಯ ದ್ರವಗಳು ನಿಮ್ಮ ತ್ವಚೆಗೆ ಪೋಷಣೆಯನ್ನು ನೀಡುತ್ತಿರುವಾಗ, ಅದರ ಸಮೃದ್ಧ ನೊರೆ ನಿಮ್ಮ ತ್ವಚೆಯನ್ನು ಸ್ವಚ್ಛಗೊಳಿಸಿ ನುಣುಪುಗೊಳಿಸುತ್ತದೆ. ಕ್ಲಿಯರ್·ಟೋನ್‌ನಿಂದ ಮಾಡಿದ ಸ್ನಾನ ನಿಮ್ಮ ತ್ವಚೆಯನ್ನು ಹಿಮಕಣದಂತೆ ನಿರ್ಮಲ, ಕುಸುಮದಳದಂತೆ ಪ್ರಫುಲ್ಲಿತ ಹಾಗೂ ಕೋಮಲವಾಗಿಡುತ್ತದೆ. ಶುಷ್ಕತೆ ಅಥವಾ ಎಣ್ಣೆಯ ಪಸೆ ಇರುವುದಿಲ್ಲ.
ಇಷ್ಟೇ ಅಲ್ಲ, ಕ್ಲಿಯರ್·ಟೋನ್ ಸಾಬೂನಿನ ವೈಶಿಷ್ಟ್ಯಪೂರ್ಣ ಫ್ರೆಂಚ್ ಸುಗಂಧದಿಂದ ನಿಮ್ಮ ಮೈ ಗಮಗಮಿಸುತ್ತ ಇರುವುದು.
ತ್ವಚೆಯ ಸಂಪೂರ್ಣ ರಕ್ಷಣೆಗೆ ಎರಡು ಅಮೂಲ್ಯ ಸಾಧನಗಳು — ಕ್ಲಿಯರ್·ಟೋನ್ ಸಾಬೂನು ಮತ್ತು ಕ್ಲಿಯರ್·ಟೋನ್ ಕ್ರೀಮ್. ನಿಕೊಲಸ್ ಲ್ಯಾಬೊರೇಟರೀಸ್ ಅವರ ಶ್ರೇಷ್ಠ ಕೊಡುಗೆಗಳು.
ನಿಮ್ಮ ತ್ವಚೆಗೆ ಗೌರವರ್ಣ ನೀಡುವುದಕ್ಕಾಗಿ!
ಪ್ರಫುಲ್ಲಿತ, ಹಾಗೂ ಕೋಮಲಗೊಳಿಸುವುದಕ್ಕಾಗಿ!
ಆರೋಗ್ಯಪೂರ್ಣಗೊಳಿಸುವುದಕ್ಕಾಗಿ!
ಕ್ಲಿಯರ್·ಟೋನ್
ತ್ವಚಾ ಸಂರಕ್ಷಣ ಸಾಬೂನು
ಲಂಡನ್ - —

ತರಂಗಾಂತರಂಗ



ಮಾಧ್ಯಮ



ಸಂದರ್ಶನ



ಧಾರಾವಾಹಿ

ಕತೆಗಳು

ರಸಾಯನ

ಲಹರಿ

ಮುಖಪುಟ : ವರ್ಣಚಿತ್ರಗಳು : ಎನ್. ಪಿ. ದೇಸಾಯಿ, ವಿನ್ಯಾಸ : ಜಯದೇವ

ಮುದ್ರಣ
ಟಿ. ಸತೀಶ್ ಯು. ಪೈ
ಮಣಿಪಾಲ ಪ್ರಕಾಶನ ಪ್ರೈ. ಲಿ. ಮಣಿಪಾಲ

ಮುದ್ರಣ ನಿರ್ವಹಣೆ
ಪಿ. ಭಾಸ್ಕರ್ ರಾವ್

ಸಂಸ್ಕರಣ
ಡಿ. ಆರ್. ಕಾಂಬಳಿ

ನಿರ್ವಾಹಕ ಸಂಪಾದಕ
ಟಿ. ಮೋಹನದಾಸ ಪೈ

ಸಹಾಯಕ ಸಂಪಾದಕ
'ಚಿರಂಜೀವಿ' (ಬೆಂಗಳೂರು)

ಸಂಪಾದಕ
ಸಂತೋಷಕುಮಾರ ಗುಲ್ವಾಡಿ

ಉಪಸಂಪಾದಕ
ಶರತ್ ಕಲ್ಕೋಡ್

ಪ್ರಕಾಶನ : ಮಣಿಪಾಲ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್ ಲಿ. ಉದಯವಾಣಿ ಬಿಲ್ಡಿಂಗ್. ಮಣಿಪಾಲ

ವಿಳಾಸ : ಪ್ರೆಸ್ ಕಾರ್ನರ್, ಮಣಿಪಾಲ, 576 119 ದೂರವಾಣಿ : 7241 (ಉಡುಪಿ)

ರೋಮಾಂಚಕಾರಿ ಧಾರಾವಾಹಿ ಕಾದಂಬರಿ

ನಿಗೂಢ ನಿಕ್ಷೇಪ



● ಕೆ. ಎ. ಅಬ್ಬಾಸ್

● ಕನ್ನಡಕ್ಕೆ : ಸಂತೋಷಕುಮಾರ ಗುಲ್ವಾಡಿ

● ಕಲೆ : ಕಮಲಾಕ್ಷ ಶೆಣೈ

ಇದುವರೆಗಿನ ಕತೆ

ವಿಜಯನಗರದ ಸುಂದರ ಮಹಾರಾಣಿ ಪೂಲಮಣಿ ಅರಮನೆಯ ಗುಪ್ತ ನಿಧಿಯನ್ನೆಲ್ಲ ರಾಜಸ್ತಾನ ಮರುಭೂಮಿಯಲ್ಲಿ ಹೂತಿಟ್ಟು, ಅದನ್ನು ಕಂಡ ತನ್ನ ಒಂಭತ್ತು ಸರದಾರರನ್ನೂ ಕೊಲ್ಲುತ್ತಾಳೆ. ಏಕಾಂಗಿಯಾಗಿದ್ದ ಆಕೆಯನ್ನು ಡಾಕೂ ಸೈತಾನ ಸಿಂಘ್ ಬಲಾತ್ಕರಿಸುತ್ತಾನೆ. ಇದನ್ನು ತಿಳಿದ ಸೈತಾನನ ಪ್ರೇಯಸಿ ಆತನನ್ನೇ ಕೊಲ್ಲುತ್ತಾಳೆ.

ಮರುಭೂಮಿಯ ಗೊಂಬೆ ಆಟಗಾರ ಮುದಿಯ ಕಲ್ಲೂ ಮುಂಬಯಿಗೆ ತನ್ನ ಮಗಳು ಸೋನೂ ಜತೆ ಬಂದು ಫೂಟ್‌ಪಾತ್‌ನಲ್ಲಿ ತನ್ನ ಗೊಂಬೆಯಾಟ ಪ್ರದರ್ಶಿಸುತ್ತ ಹಣ ಗಳಿಸುತ್ತಾನೆ. ಆ ಫೂಟ್‌ಪಾತ್ ಪಕ್ಕದಲ್ಲಿರುವ ಕಟ್ಟಡದಲ್ಲಿ ಒಂದು ಕೋಣೆಯಲ್ಲಿ "ನಾಲ್ಕು ಮಿತ್ರರು" ಎಂದು ಬೋರ್ಡು ಹಾಕಿಕೊಂಡು ಮೂವರು ಬ್ರಹ್ಮಚಾರಿಗಳು ವಾಸಿಸುತ್ತಿದ್ದಾರೆ. ನಾಲ್ಕನೆಯವನಿಗಾಗಿ ಕಾಯುತ್ತಿದ್ದಾರೆ.

ಪತ್ರಿಕಾ ಕಚೇರಿಯ ಕಂಪೋಸಿಟರ್ ರಾಬರ್ಟ್, ಸಿನಿಮಾ ತಾರೆ ಆಗಲು ಮುಂಬಯಿಗೆ ಬಂದು ಈಗ ಎಕ್ಸ್‌ಟ್ರಾ ಆಗಿರುವ ನಿರ್ಮಲ ಕುಮಾರ (ಮಥೋರಾಮ ಅವನ ನಿಜವಾದ ಹೆಸರು) ಮತ್ತು ಫೂಟ್‌ಪಾತ್‌ಗಳಲ್ಲಿ ಬನಿಯನ್ ಮಾರಾಟ ಮಾಡುತ್ತ ಸಿನೆಮಾ ಕವಿಯಾಗುವ ಕನಸು ಕಾಣುತ್ತಿರುವ ಅಬ್ದುಲ್ ಕರೀಮ್ – ಈ ಮೂವರೂ ಬ್ರಹ್ಮಚಾರಿಗಳು. ಎಲ್ಲರೂ ಸಮಾನರಾಗಿ ಪ್ರೀತಿ, ವಿಶ್ವಾಸಗಳಿಂದ ಪ್ರಾಮಾಣಿಕರಾಗಿ ಬದುಕಬೇಕು ಎಂಬುದು ಅವರ ಆದರ್ಶ.

ಈ ಮೂವರು ಗೆಳೆಯರೂ ತಮ್ಮ ಕೋಣೆಯ ಕಿಟಕಿಯಿಂದ ಕಲ್ಲೂವಿನ ಗೊಂಬೆಯಾಟ ನೋಡುತ್ತಾರೆ. ಅವನ 16 ವರ್ಷದ ಆಕರ್ಷಕ ಮಗಳು ಸೋನೂ ಹಾಡುವುದನ್ನು ಕೇಳಿ ಖುಷಿಪಡುತ್ತಾರೆ.

ರಾತ್ರಿ ಫೂಟ್‌ಪಾತ್‌ನಲ್ಲಿ ಮಲಗಿದ ಕಲ್ಲೂವಿನ ಮೇಲೆ ಯಾರದೋ ಕಾರು ಹಾದು ಆತ ಜಜ್ಜಿ, ಸತ್ತುಹೋಗುತ್ತಾನೆ. ಸೋನೂ ಅಳುತ್ತಿದ್ದಾಳೆ.

ಅಧ್ಯಾಯ - 5

ಕಳ್ಳ ವ್ಯಾಪಾರಿ

ಚಿಕ್ಕಂದಿನಿಂದಲೂ ಭಿಕೂಭಾಯಿಗೆ ಕಾರುಗಳೆಂದರೆ ವಿಶೇಷ ಮೋಹ.

ಅವನ ಐದನೆಯ ಹುಟ್ಟುಹಬ್ಬಕ್ಕೆ ಬ್ಯಾಟರಿಯಿಂದ ಚಲಿಸುವ ಒಂದು ಕಾರನ್ನು ತಂದೆ ಉಡುಗೊರೆ ಕೊಟ್ಟಿದ್ದರು.

ಅವನಿಗೆ ಎಂಟು ವರ್ಷ ಎನ್ನುವಾಗ ತಂದೆಯ ಪಕ್ಕದಲ್ಲೇ ಇಂಪಾಲಾ ಕಾರಿನಲ್ಲಿ ಕೂತು ಸ್ಟಿಯರಿಂಗ್ ತಿರುಗಿಸಲು ಆತ ಕಲಿತ.

ಹನ್ನೊಂದು ವರ್ಷ ಎನ್ನುವಾಗ ತನ್ನ ಡ್ರೈವರ್‌ಗೆ ಹೇಳಿ ಭಿಕೂಭಾಯಿಗೆ ಕಾರು ಡ್ರೈವಿಂಗ್ ಕಲಿಸಿದ್ದರು ತಂದೆ. ಮೂರೇ ದಿನಗಳಲ್ಲಿ ಭಿಕೂ ಕಾರು ನಡೆಸುವುದನ್ನು ಕರತಲಾಮಲಕ ಮಾಡಿಕೊಂಡ.

ಅವನ ತಂದೆ ದೊಡ್ಡ ಕಳ್ಳವ್ಯಾಪಾರಿ. ಆ ದಿನಗಳಲ್ಲಿ ಸ್ಮಗ್ಲಿಂಗ್ ಎಂದರೆ ಅನ್ಯಾಯ, ತಪ್ಪು ಎಂಬ ಕಳವಳ ಭಾವನೆಗಳಿರಲಿಲ್ಲ. ಅದೂ ಒಂದು ವ್ಯವಸಾಯವಾಗಿತ್ತು. ಅಷ್ಟೆ. ಮುಂಬಯಿಯ ಸಮಾಜದಲ್ಲಿ ಮೋಹನಭಾಯಿ ಭಾರಿ ಕಳ್ಳ ವ್ಯಾಪಾರಿ ಎಂದು ಎಲ್ಲರಿಗೂ ತಿಳಿದಿತ್ತು. ಆದರೆ ಎಲ್ಲರ ಮನೆಬಾಗಿಲುಗಳೂ ಆತನಿಗಾಗಿ ತೆರೆದಿದ್ದವು. ಶ್ರೀಮಂತವರ್ಗದವರಿಗೆಲ್ಲ ಅವನೊಡನೆ ವ್ಯಾಪಾರ ವಹಿವಾಟು ಇದ್ದಿತ್ತು. ಒಬ್ಬರಿಗೆ ಒಂದು ವಿದೇಶೀ ರಿಸ್ಟ್‌ವಾಚ್ ಬೇಕಾಯಿತು, ಇನ್ನೊಬ್ಬರಿಗೆ ಒಳ್ಳೆಯ ವ್ಹಿಸ್ಕಿ ಬೇಕಾಯಿತು, ಯಾರೊಬ್ಬನ ಹೆಂಡತಿಗೆ ವಿದೇಶೀ ಶಿಫಾನ್ ಸೀರೆ ಬೇಕು, ಮಗನಿಗೆ ಸೂಟ್ ಪೀಸ್ ಬೇಕೆಂದರೆ ಮೋಹನಭಾಯಿ ಬಳಿ ಹೇಳಿದರೆ ಸರಿ ದೊರೆಯುತ್ತಿತ್ತು.

ಭಿಕೂಭಾಯಿಗೆ ಹದಿನೆಂಟು ವರ್ಷವೆಂದಾಗ (ಆಗ ಆತ ಮರ್ಸಿಡಿಸ್‌ಬೆಂಝ್ ಕಾರು ಬಿಡುತ್ತಿದ್ದ) ಅವನ ತಂದೆ ತೀರಿಕೊಂಡರು. ಮುಂಬಯಿಯ ಹೆಸರಾಂತ ಇಂಗ್ಲಿಷ್ ಹಾಗೂ ಗುಜರಾತಿ ದೈನಿಕಗಳಲ್ಲಿ ಸುದ್ದಿ ಪ್ರಕಟವಾಯಿತು. ಖ್ಯಾತ 'ಆಮದು ವ್ಯಾಪಾರಿ' ಮೋಹನಭಾಯಿ ಹೃದಯಾಘಾತದಿಂದ ನಿಧನರಾದರು ಎಂದು ಬಂತು. (ಸ್ಮಗ್ಲರ್‌ಗಳನ್ನು ಆಗ 'ಆಮದು ವ್ಯಾಪಾರಿ'ಗಳೆಂದೇ ಕರೆಯುವ ಕ್ರಮ) ಭಿಕೂಭಾಯಿ ಆತನ ಏಕಮಾತ್ರ ಉತ್ತರಾಧಿಕಾರಿ. ಅವನ ಎಲ್ಲ ಆಸ್ತಿ, ಪಾಸ್ತಿ, ವ್ಯಾಪಾರ ವಹಿವಾಟು ಅವನಿಗೇ. ಭಿಕೂಭಾಯಿ ಆಗಲೆ ವ್ಯಾಪಾರದಲ್ಲಿ ಕೈಚಳಕ ತೋರಿಸಿದ್ದ. ಚತುರನಾಗಿದ್ದ.

ತನ್ನ ತಂದೆಯ ಕುರ್ಚಿಯಲ್ಲಿ ಭಿಕೂಭಾಯಿ ಕೂತ. ಮುಂದುಗಡೆ ಆರು ಫೋನುಗಳು. ಎಲ್ಲ ಮುಖ್ಯ ಸ್ಮಗ್ಲಿಂಗ್ ಕೇಂದ್ರಗಳಿಗೆ ಅಲ್ಲಿಂದ ನೇರ ಸಂಪರ್ಕವಿಟ್ಟುಕೊಂಡು 'ಆಮದು'ಹೆಚ್ಚಿಸಿಕೊಂಡ. ರಫ್ತನ್ನೂ ಆರಂಭಿಸಿದ. ವಿದೇಶೀ ಮ್ಹಾಲನ್ನು ಭಾರತಕ್ಕೆ ತರುವುದು ಅವನ 'ಆಮದು'. ಭಾರತದ ಪ್ರಾಚೀನ ವಿಗ್ರಹಗಳು, ನಾಣ್ಯಗಳು, ದೀಪಗಳು ಮೊದಲಾದುವನ್ನು ವಿದೇಶಗಳಿಗೆ – ಮುಖ್ಯವಾಗಿ ಅಮೆರಿಕೆಗೆ ಕಳಿಸುವುದು ಅವನ 'ರಫ್ತು'. ದೇವಸ್ಥಾನಗಳ ಕೆತ್ತನೆ ಕೆಲಸದ ತುಂಡುಗಳು, ಹಳೆಯ ಚಿಕಣಿ ಚಿತ್ರಗಳು (ಮಿನಿಯೇಚರ್ ಪೈಂಟಿಂಗ್‌ಗಳು), ಹಳೆಯ ಫರ್ನೀಚರು, ಪಂಚಲೋಹ ಮೂರ್ತಿಗಳು – ಇವುಗಳ ಹೊಸ ಆವೃತ್ತಿಗಳನ್ನೂ ಆತ ತನ ಮೊರಾದಾಬಾದ್ ಕಾರ್ಖಾನೆಯಲ್ಲಿ ಮಾಡಿಸಿ ರಫ್ತು ಮಾಡಲಾರಂಭಿಸಿದ. ಈ ವಸ್ತುಗಳನ್ನು ತಯಾರಿಸಿದ ಬಳಿಕ ಎರಡು - ಮೂರು ವರ್ಷ ಕಾಲ ನೆಲದೊಳಗೆ ಹೂತಿಟ್ಟು ಅವು ಹಳೆಯವು ಎಂದು ಕಾಣುವಂತೆ ಮಾಡಲಾಗುತ್ತಿತ್ತು. ಪ್ರಾಚ್ಯವಸ್ತು ಸಂಗ್ರಾಹಕರು, ಸಂಶೋಧಕರು, ಮ್ಯೂಸಿಯಮ್‌ಗಳ ನಿರ್ದೇಶಕರುಗಳಿಗೆ ಭಿಕೂಭಾಯಿಯ 'ಹಳೆ' ವಸ್ತುಗಳ ಹಳೆತನ ಕಂಡು ಹಿಡಿಯಲು ಆಗುತ್ತಿರಲಿಲ್ಲ. ಕಾಥಿಯಾವಾಡದಲ್ಲಿ ಭಿಕೂಭಾಯಿ ಒಂದು ಮ
ಕಾರ್ಖಾನೆ ಆರಂಭಿಸಿ ಅಲ್ಲಿ ಹಳೆ
ಸದ ಫರ್ನೀಚರುಗಳನ್ನು ಉತ್ಪಾದಿ
ಅನಂತರ ಅದಕ್ಕೆ ಹೊಗೆ, ಆಮ್ಲ,
ಗಳಿಂದ ಪ್ರಾಚೀನ ಕಳೆ ಕೊಡುತ್ತಿ
ಈ ಫರ್ನೀಚರನ್ನು ಆತ ತನ್ನ ಲಂ
ಆಫೀಸಿಗೆ ಮಾರುತ್ತಿದ್ದ. ಅವುಗಳ
ಅಲ್ಲಿಯ ಕ್ರಿಸ್ಟಿ ಮೊದಲಾದ ಖ
ಹಳೆಸಾಮಾನು ಹರಾಜು ಮಾಡ
ಕಂಪೆನಿಗಳ ಮೂಲಕ ಪ್ರತಿ ವಸ್ತುವ
ನೂರಾರು, ಸಾವಿರಾರು ಪೌಂಡಿಗೆ ಮ
ಲಾಗುತ್ತಿತ್ತು.

ಭಿಕೂಭಾಯಿ ಲಕ್ಷಾಂತರ ಗಳಿಸಿ
ವಿದೇಶಗಳಲ್ಲಿ ಗಳಿಸಿದ ಹಣವನ್ನು ಸ್ವಿ
ಬ್ಯಾಂಕ್‌ನಲ್ಲಿ ಇಟ್ಟ. ತಂದೆಯ ವ್ಯಾಪ
ವನ್ನು ಆತ ಹಲವು ಪಟ್ಟು ಹೆಚ್ಚಿಸಿ
ಲಂಡನ್ ಹಾಗೂ ಮುಂಬಯಿಯ
ಆತ ಎರಡು ಪಂಚತಾರಾ ಹೊಟೇ
ಗಳನ್ನು ಆರಂಭಿಸಿದ. ಮುಂಬಯಿಯ
ಭಿಕೂಭಾಯಿ ಇನ್ನೊಂದು ನಾಲ್ಕು ನಕ್ಷ
ಗಳ ಮಟ್ಟದ ರೆಸ್ಟೊರೆಂಟ್ ನಡೆಸುತ್ತಿದ
ನ್ಯೂಯಾರ್ಕ್‌ನ ಫಿಫ್ತ್ ಅವೆನ್ಯೂದ
ಅವನು ಆರಂಭಿಸಿದ ಹೊಟೇಲಿಗೆ ಭಾರ
ಸರಕಾರ ಲಕ್ಷಾಂತರ ಸಾಲ ಕೊಟ್ಟಿತು
ಹೊಟೇಲಿನ ಪಿಂಗಾಣಿ, ಸ್ಟೀಲಿನ ಪಾ
ಗಳಿಗೆ ಈ ಸಾಲ ಕೊಡಲಾಗಿತ್ತು.
ಸಾಲ ಪಡೆಯಲೆಂದು ಆತ ದೆಹಲಿಯ
ಪಂಚತಾರಾ ಹೊಟೇಲಲ್ಲಿ ಕೆಲವು ದಿ
ನಿಂತು ಆರುವತ್ತು ಸಾವಿರ ರೂಪಾಯಿ
ಖರ್ಚು ಮಾಡಬೇಕಾಯಿತು. ಕ್ರಮೇಣ
ಆತ ಮುಂಬಯಿಯ ಹೊಟೇಲನ್ನು
ನೂರಹತ್ತು ಲಕ್ಷಗಳಿಗೆ ಮಾರಿದ. ಆದರ
ಆ ಹೊಟೇಲಿನ ಒಂದು ಉತ್ತಮ
ಸೂಟನ್ನು ಭಿಕೂಭಾಯಿಗೆ ಕಾದಿರಿಸಲಾ
ಗಿತ್ತು. ತನ್ನ ವಿಶೇಷ ಅತಿಥಿಗಳನ್ನು ಆತ
ಅಲ್ಲಿ ಖುಷಿಪಡಿಸುತ್ತಿದ್ದ. ಮುಂಬಯಿಯ
ವ್ಯಾಪಾರಿವಲಯದಲ್ಲಿ ಭಿಕೂಭಾಯಿಯ
ಪಾರ್ಟಿಗಳೆಂದರೆ ಭಾರಿ ಪ್ರಸಿದ್ಧ. ಅಲ್ಲಿ
ಧಾರಾಳ ವಿದೇಶೀ ವ್ಹಿಸ್ಕಿ ಹಾಗೂ ಆ
ರ್ಷಕ ಹುಡುಗಿಯರು ಇರುತ್ತಿದ್ದರು.

ತುರ್ತು ಪರಿಸ್ಥಿತಿ ಬಂತು. ಭಿಕೂ
ಭಾಯಿ ಮೇಲೆ ವಾರಂಟು ಹಾಕಲಾ
ಯಿತು. ಈ ಬಗ್ಗೆ ಪೊಲೀಸರು ಮುಂದಾ
ಗಿಯೆ ಆತನಿಗೆ ಎಚ್ಚರಿಕೆ ಕೊಟ್ಟರು
ಅಂದೇ ರಾತ್ರಿ ಲಂಡನ್ - ನ್ಯೂಯಾರ್ಕ್
ವಿಮಾನವನ್ನು ಭಿಕೂಭಾಯಿ ಹತ್ತಿದ
ತನ್ನ ಸಂಪರ್ಕದ ಎಲ್ಲ ಸ್ಮಗ್ಲಿಂಗ್ ಕೇಂದ್ರ
ಗಳಿಗೂ ಮುನ್ನೆಚ್ಚರಿಕೆಯಿತ್ತ. ತಾನ
ಸ್ವಾತಂತ್ರ್ಯ ಚಳವಳಿಗಾರ ಎಂದ
ಹೇಳುತ್ತ ನ್ಯೂಯಾರ್ಕ್‌ನಲ್ಲಿ ಆತ ಕೆಲವ
ದಿನ ಕಳೆದ. ತಾನೂ ಜಯಪ್ರಕಾಶ ನಾರ
ಯಣರಂತೆಯೆ ದೇಶಕ್ಕಾಗಿ ಸರ್ವಾರ್ಪ
ಮಾಡಿದ್ದೇನೆ ಎಂದು ಹೇಳಿ ನ್ಯೂಯಾರ್ಕ್

ಅಮೃತ ಮಹೋತ್ಸವ ಆಚರಿಸುವ ಸದ್ಬೋಧ ಚಂದ್ರಿಕೆ

● ಎಸ್. ಸಿ. ದೇಸಾಯಿ

'ಆನಂದವನ'- ಧಾರವಾಡ ಜಿಲ್ಲೆಯಲ್ಲಿಯ ಹಾವೇರಿ ತಾಲೂಕಿನ ಒಂದು ಹಳ್ಳಿಯಾದ 'ಅಗಡಿ'ಯ ಹತ್ತಿರವಿರುವ, 'ಅಗಡಿಯ ಸಾಧುಗಳು' ಎಂದು ಪ್ರಸಿದ್ಧರಾದ ಸದ್ಗುರು ಶ್ರೀ ಶೇಷಾಚಲ ಮಹಾರಾಜರ ತಪೋಭೂಮಿ. ಇಂದು ಅಲ್ಲಿ 'ಆನಂದವನ' ಎಂಬ ಹೆಸರಿನಲ್ಲಿಯೇ ಸಾವಿರಪುಟದ ಬೃಹತ್‌ಗ್ರಂಥ ಒಂದನ್ನು ಹೊರತರುವ ಚಟುವಟಿಕೆ ಎಡೆಬಿಡದೆ ನಡಿದಿದೆ. ಕಾಗದಗಳ ರಾಶಿ, ರಾಶಿ ಬಂದಿದೆ. ಶೇಷಾಚಲ ಸದ್ಗುರು ಮುದ್ರಣಾಲಯುಗಳಲ್ಲಿಯ ಅಚ್ಚಿನ ಯಂತ್ರಗಳ ಸದ್ದು ದಿನದ 24 ಗಂಟೆಗಳಲ್ಲಿಯೂ ಕೇಳಿ ಬರುತ್ತಿದೆ. ಒಂದಷ್ಟು ಜನ ಅಚ್ಚಿನ ಮೊಳೆ ಜೋಡಿಸುತ್ತಾರೆ, ಕೆಲವರು ಕರಡು ತಿದ್ದುತ್ತಾರೆ, ಇನ್ನಷ್ಟು ಜನ ಅಚ್ಚಾದ ಹಾಳೆಗಳನ್ನು ಮಡಿಸುತ್ತಾರೆ. ಸಂಪಾದಕರೂ - ಸ್ವಾಮಿಗಳೂ ಆದ ಶ್ರೀ ಚಿದಂಬರಮೂರ್ತಿಗಳು, "ನೋಡು, ದೇಸಾಯರಿಂದ ಧಾರವಾಡ ಜಿಲ್ಲೆಯ ಲೇಖನ ಬಂದಿಲ್ಲ, ಕೂಡಲೇ ಕಳಿಸಲು ಅವರಿಗೆ ತಂತಿ ಮಾಡು..." ಎಂದು ಹೇಳುತ್ತಾರೆ. ಹೀಗೆ ಇಂದು ಆನಂದವನದಲ್ಲಿ ನಡೆದಿರುವದು ಸಾಹಿತ್ಯ ಕೃಷಿಯ ಚಟುವಟಿಕೆಗಳು.

ಈಗಷ್ಟೇ ಅಲ್ಲ, ಈ ಚಟುವಟಿಕೆ ಆನಂದವನದಲ್ಲಿ 75 ವರ್ಷಗಳಷ್ಟು ಹಿಂದೆಯೇ ಪ್ರಾರಂಭವಾಗಿದೆ. ನಿಜವಾಗಿ ಹೇಳಬೇಕೆಂದರೆ 'ಆನಂದವನ' ಒಂದು ಸಾಧುಗಳ ಸ್ಥಾನ. ಅಲ್ಲಿ ಈ ಸಾಹಿತ್ಯ ಕೃಷಿ ಆದುದೂ ಒಂದು ವಿಚಿತ್ರವೆ! ಸಾಧುಗಳ ಶಿಷ್ಯರ ಬೇಡಿಕೆಯ ಮೇರೆಗೆ ಅಲ್ಲಿ ಆಗಲೇ ಸಂಸ್ಕೃತ -ವೇದ ಪಾಠಶಾಲೆ ಪ್ರಾರಂಭವಾಗಿತ್ತು. ಇನ್ನು ಕೆಲ ಶಿಷ್ಯವರ್ಗ, ಕನ್ನಡ ನುಡಿಯಸೇವೆ, ಸಾಹಿತ್ಯ ಸೇವೆ, ದೇಶಸೇವೆ, ಇಲ್ಲಿಂದೇಕೆ ನಡೆಯಬಾರದು? ಎಂದು ಯೋಚಿಸಿದರು. ಹಾಗೆ ಯೋಚಿಸಿದವರಲ್ಲಿ ಮುಖ್ಯರು, 'ಗಳಗನಾಥ'ರೆಂದು ಪ್ರಸಿದ್ಧರಾದ ವೆಂಕಟೇಶ ತಿರಕೋ ಕುಲಕರ್ಣಿ, ಎಲ್ಗೋ ಗುಡ್ಡೋ ಕುಲಕರ್ಣಿಯವರು. ಹಾಗೂ ಅವರ ಸ್ನೇಹವರ್ಗ, ತಮ್ಮ ಈ ಯೋಜನೆಯನ್ನು ಸಾಧುಗಳಲ್ಲಿ ಕೋರಿ, ಅವರಿಂದ 'ಆಗಲಿ' ಎಂದು ಅಪ್ಪಣೆ ಪಡೆದರು.


ಕ್ರಿ.ಶ. 1908ನೆಯ ವರ್ಷದ ಯುಗಾದಿಯಂದು ಕನ್ನಡದ ಈ ಕೊಂಪೆ 'ಆನಂದವನ'ದಲ್ಲಿ 'ಸದ್ಬೋಧ ಚಂದ್ರಿಕೆ' ಅರಳಿದಳು. ಮಂದಹಾಸದಿಂದ ಸಾವಕಾಶವಾಗಿ ತನ್ನ ಪರಿಮಳವನ್ನು ಬೀರತೊಡಗಿದಳು, ದಿನದಿನಕ್ಕೆ ಈ ಪರಿಮಳ ಕನ್ನಡದ ಮೂಲೆ ಮೂಲೆಗೂ ಪಸರಿಸತೊಡಗಿತು.

ಇಂದಿಗೆ ಮುಕ್ಕಾಲು ಶತಮಾನಗಳ ಹಿಂದೆ, ಕರ್ನಾಟಕದ - ಕನ್ನಡದ ಸ್ಥಿತಿ ಚೆನ್ನಾಗಿರಲಿಲ್ಲ. ನಾಡು, ಬೇರೆ


75 ವರ್ಷಗಳ ಹಿಂದೆ ಮರಾಠಿ ವಾತಾವರಣವಿದ್ದ ಉತ್ತರ ಕರ್ನಾಟಕದ ಪ್ರದೇಶದಲ್ಲಿ ಆರಂಭಗೊಂಡ ಕನ್ನಡ ಪತ್ರಿಕೆ 'ಸದ್ಬೋಧ ಚಂದ್ರಿಕೆ'

ಕನ್ನಡವೆಂದರೆ ಮೂಗುಮುರಿಯುತ್ತಿದ್ದ ಕನ್ನಡಿಗರಲ್ಲಿ ಕನ್ನಡದ ಕಂಪನ್ನು ಹಂಚಿದ ಈ ಪತ್ರಿಕೆ ಲೆಕ್ಕವಿಲ್ಲದಷ್ಟು ಸಾಹಿತಿಗಳನ್ನು ಸೃಷ್ಟಿಸಿ, ಬೆಳೆಸಿದೆ.

ಹಲವು ಏಳುಬೀಳುಗಳ ಗೊಂದಲದಲ್ಲಿ ಮುಳುಗೆದ್ದು, ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದ ಹಿರಿಯ ಪತ್ರಿಕೆಯ ಪರಿಚಯ ಈ ಲೇಖನ.



ಚಂದ್ರಿಕೆಯ ಜನ್ಮಕ್ಕೂ ಬೆಳವಣಿಗೆಗೂ ಕಾರಣರಾದ ಗಳಗನಾಥರು



ಪ್ರಥಮ ಸಂಪಾದಕರು
ಎಲ್ಗೋ ಗುಡ್ಡೋ ಕುಲಕರ್ಣಿಯವರು



ಆನಂದವನದ ಗುರುಗಳೂ ಸದ್ಬೋಧ ಚಂದ್ರಿಕೆಯ ಸಂಪಾದಕರೂ ಆಗಿರುವ ಪೂಜ್ಯ ಶ್ರೀ ಚಿದಂಬರಮೂರ್ತಿ ಸ್ವಾಮಿಯವರು

ಬೇರೆ ಆಡಳಿತಗಳಿಗೆ ಹಂಚಿಹೋಗಿತ್ತು. ಮಹಾರಾಜರು ಆಳುತ್ತಿದ್ದ 'ಮೈಸೂರು' ಸೀಮೆಯನ್ನು ಬಿಟ್ಟರೆ ಕನ್ನಡಮ್ಮನ ಅವಯವಗಳೇ ಒಂದೊಂದು ಅಧಿಕಾರದಲ್ಲಿ ಸಿಕ್ಕಿ ಬಿದ್ದಿದ್ದವೆಂದು ಹೇಳಬಹುದು. ಇಂದಿನ ಉತ್ತರ ಕರ್ನಾಟಕಕ್ಕೆ "ದಕ್ಷಿಣ ಮಹಾರಾಷ್ಟ್ರ"ವೆಂದು ಹೆಸರಿತ್ತೆಂದು ಕೇಳಿದರೆ ಆಶ್ಚರ್ಯ ಆಗುತ್ತದೆ.

ಕರ್ನಾಟಕದಲ್ಲಿ ಹಾದುಹೋದ ರೈಲುಮಾರ್ಗವನ್ನು ಮದ್ರಾಸ್ ಆ್ಯಂಡ್ ಸದರ್ನ್ ಮರಾಠಾ ರೇಲ್ವೆಯೆಂದು ಕರೆಯುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಓದುತ್ತಿದ್ದ ಅಂದಿನ ಪತ್ರಿಕೆ ಲೋಕಮಾನ್ಯ ತಿಲಕರ ಮರಾಠಿ 'ಕೇಸರಿ'ಯಾಗಿತ್ತು. ಕನ್ನಡಿಗರ ಕನ್ನಡದ ಅಭಿಮಾನವೇ ಶೂನ್ಯವಾಗಿದ್ದ ಕಾಲವದು. ಶಹರಗಳಲ್ಲಿ ಓದುತ್ತಿದ್ದ ಪತ್ರಿಕೆಗಳು ಇಂಗ್ಲಿಷು ಭಾಷೆಯವು. ಕನ್ನಡದ ಏನಾದರೂ ಸಚಿತ್ರ ಸುದ್ದಿಯನ್ನು ಕೊಡಬೇಕಾದರೆ ಮರಾಠಿ 'ಚಿತ್ರಮಯ ಜಗತ್' ಎಂಬ ವಾರಪತ್ರಿಕೆಯ ಮೊರೆ ಹೋಗಬೇಕಿತ್ತು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಜನ್ಮತಾಳಿದವಳೇ ಈ "ಸದ್ಬೋಧ ಚಂದ್ರಿಕೆ". ಆನಂದವನದಲ್ಲಿ, ಶೇಷಾಚಲ ಸಾಧುಗಳ ಆಶೀರ್ವಾದದಿಂದ. ಗಳಗನಾಥರು-ಎ. ಗು. ಕುಲಕರ್ಣಿಯವರ ಕರುಳಿನ ಕುವರಿಯಾಗಿ.

ಮಠ, ಸ್ವಾಮಿಗಳು ಎಂದೊಡನೇ ಸಾಕಷ್ಟು ಹಣವಿರುವ ಸ್ಥಳ ಎಂದು ಸಾಮಾನ್ಯವಾಗಿ ಊಹಿಸುವ ಮಾತು. ಸದ್ಬೋಧ ಚಂದ್ರಿಕೆಯ ಸ್ಥಾಪನೆಗೆ ಅಗಡಿಯ ಸಾಧುಗಳು ಸಾಕಷ್ಟು ಹಣ ನೀಡಿರಬೇಕೆಂದು ಯಾರಾದರೂ ಯೋಚಿಸಿದರೆ ಅದು ತಪ್ಪು. ಅವರು ನೀಡಿದ್ದು ಆಶೀರ್ವಾದವನ್ನು ಮಾತ್ರ. ಆನಂದವನಕ್ಕೆ ಯಾವ ಆಸ್ತಿ ಆಗಲೀ, ಆರ್ಥಿಕ ಬಲವಾಗಲೀ ಎಂದಿಗೂ ಇಲ್ಲ. ಎಲ್ಲವೂ ಭಕ್ತರು ನೀಡಿದ ಕಾಣಿಕೆಯಿಂದಲೇ ನಡೆಯಬೇಕು. ಚಂದ್ರಿಕೆಯ ಜನ್ಮವೂ ಬೆಳವಣಿಗೆಯೂ ಹಾಗೆಯೇ ಬೆಳೆದು ಬಂದುದು.

'ಚಂದ್ರಿಕೆ' ಪ್ರಾರಂಭದಲ್ಲಿ ಮುದ್ರಣವಾಗುತ್ತಿದ್ದುದು 50 ಮೈಲಿ ದೂರದ ಹುಬ್ಬಳ್ಳಿಯಲ್ಲಿ. ಆಗ ವಾಹನಗಳ ಸೌಕರ್ಯವೂ ಚೆನ್ನಾಗಿರಲಿಲ್ಲ. ಹಾವೇರಿ ರೈಲು ನಿಲ್ದಾಣದಿಂದ ಚಕ್ಕಡಿಯಲ್ಲೋ, ಹೊತ್ತೋ ಪ್ರತಿಗಳನ್ನು ಆನಂದವನಕ್ಕೆ ತಂದು ಚಂದಾದಾರರಿಗೆ, ಅಂಚೆಗೆ ಹಾಕಬೇಕು. ಆಗ ಪ್ರತಿಗಳು ಹೋಗುತ್ತಿದ್ದುದು 'ಚಂದಾ' ಮೂಲಕವೇ. ಇಂದಿನಂತೆ ಅಂದು 'ಸ್ಟಾಲ್'ಗಳೂ ಇರಲಿಲ್ಲ. ಪತ್ರಿಕೆಗಳೇ ಇಲ್ಲವೆಂದ ಮೇಲೆ ಸ್ಟಾಲ್‌ಗಳು ಹೇಗೆ ಬರಬೇಕು? ದಿನದಿನಕ್ಕೆ ಜನಪ್ರಿಯತೆ ಹೆಚ್ಚಾದಂತೆ ಚಂದ್ರಿಕೆಯ ಪ್ರತಿಗಳನ್ನು ಹೆಚ್ಚು ಹೆಚ್ಚು ಮುದ್ರಿಸಬೇಕಾಯಿತು. ಹುಬ್ಬಳ್ಳಿಯ ಛಾಪಖಾನೆಯಲ್ಲಿ ಅಚ್ಚು ಹಾಕುವದು, ತರುವದು, ಅಂಟಿಸುವದು, ತೊಂದರೆಯೆನಿಸಿದಾಗ ಗಳಗನಾಥರ ಗುಂಪು ಸ್ವಂತ ಮುದ್ರಣಾಲಯವನ್ನು ಹೊಂದಲು ಮತ್ತೊಮ್ಮೆ ಸಾಧುಗಳ ಅಪ್ಪಣೆ ಪಡೆದಿದ್ದಾರೆ. ಆಗ ಅವರು ಹೊಂದಿದ್ದು 'ಕೈಪ್ರೆಸ್' ಮಾತ್ರ.

ಕಾಲಕಳೆದಂತೆ ಚಂದ್ರಿಕೆಗೆ ಬೇಡಿಕೆ ಬೆಳೆಯುತ್ತಲೇ ಹೋಗಿದೆ. ಬೇಕಾಗುವಷ್ಟು ಪ್ರತಿಗಳನ್ನು ಈ ಕೈಪ್ರೆಸ್ಸಿನ ಮೇಲೆ ಅಚ್ಚಿಸುವದೂ ಕಷ್ಟವಾದಾಗ ಇನ್ನಷ್ಟು ದೊಡ್ಡ ಪ್ರೆಸ್ಸನ್ನು ಹೊಂದಿದ್ದಾರೆ. ಆಗ್ಗೆ ಭಿಕಾಜಿ, ಪರಶುರಾಮ ಕಾಳೆ ಎಂಬುವವರು ರೇಲ್ವೆ ಮುದ್ರಣಾಲಯದ ತಮ್ಮ ನೌಕರಿಗೆ ರಾಜೀನಾಮೆ ಕೊಟ್ಟು, ಈ ಛಾಪಖಾನೆಯ ವ್ಯವಸ್ಥೆಗೆ ಬಂದುನಿಂತರು. ಕೇವಲ 'ಸೇವೆ' ಈ ದೃಷ್ಟಿ

ಅಮೃತಮಹೋತ್ಸವ-ಆನಂದವನ

ಚಂದ್ರಿಕೆಯ ಸಮಕಾಲೀನ ಪತ್ರಿಕೆಗಳಲ್ಲಿ ಹೆಚ್ಚಿನವು ಈಗ ಇಲ್ಲ. ಚಂದ್ರಿಕೆ ಅತ್ಯಂತ ಊರ್ಜಿತಾವಸ್ಥೆಗೆ ಮುಟ್ಟಿ ನಂತರ ಎಷ್ಟೋ ಕಷ್ಟ-ನಷ್ಟಗಳನ್ನು ಎದುರಿಸಿಯೂ ಈ ಎಪ್ಪತ್ತೈದು ವರ್ಷಗಳಲ್ಲಿ ಎಂದೂ ನಿಲ್ಲದೇ ಅವಿರತ ಸೇವೆಯನ್ನು ಸಲ್ಲಿಸಿದ್ದಾಳೆ. ಈ ಮುಕ್ಕಾಲು ಶತಮಾನದ ಕುರುಹಿಗಾಗಿ ಸ್ವಾಮಿಗಳು ವಿಜೃಂಭಣೆಯ ಉತ್ಸವವನ್ನು ಯೋಚಿಸಿದ್ದಾರೆ. ಈ ಸವಿನೆನಹಿಗಾಗಿ "ಆನಂದವನ" ಎಂಬ ಹೆಸರಿನಿಂದಲೇ ಸಾವಿರ ಪುಟದ ಬೃಹದ್ಗ್ರಂಥವೊಂದು ರೂಪುಗೊಳ್ಳುತ್ತಲಿದೆ. ಚಂದ್ರಿಕೆಯನ್ನು ಓದಿ ಸಾಹಿತ್ಯ ರಂಗಕ್ಕಿಳಿದ ಎಷ್ಟೋ ಹಿರಿಕಿರಿಯ ಸಾಹಿತಿಗಳು ವಿವಿಧ ವಿಷಯಗಳ ಬಗ್ಗೆ ಈ ಗ್ರಂಥಕ್ಕೆ ಬರೆದಿದ್ದಾರೆ. ಪೂರ್ವ ಪ್ರಕಟಣೆಯ ಬೆಲೆ: ಕೇವಲ ರೂಪಾಯಿ 50 ಮಾತ್ರ. ಈ ಗ್ರಂಥದ ಪ್ರಧಾನ ಸಂಪಾದಕರೂ ಸ್ವಾಮಿಗಳು – ಸಂಪಾದಕ ಸಹಾಯಕ್ಕೆ ನಿಂತವರು ಶ್ರೀ ತ. ಸು. ಶಾಮರಾಯರು ಹಾಗೂ ಶ್ರೀ ಸಿ. ಎಸ್. ಕುಲಕರ್ಣಿ (ಚಿದಂಬರಾನಂದ)ಯವರು.

ಆನಂದವನ ಗ್ರಂಥಕ್ಕೆ ಸರ್ವಶ್ರೀ ವಿ. ಕೆ. ಗೋಕಾಕ್ ರಂ. ಶ್ರೀ ಮುಗಳಿ, ತ. ರಾ. ಸು., ಹಾ. ಮಾ. ನಾಯಕ್, ಕೃಷ್ಣಮೂರ್ತಿ ಪುರಾಣಿಕ, ಶ್ರೀನಿವಾಸ ಹಾವನೂರು, ಕೆ. ಟಿ. ಪಾಂಡುರಂಗಿ, ಬಿ. ಎ. ರಾಮನ್, ಬಿ. ಎಚ್. ಶ್ರೀಧರ, ಎಸ್. ವಿ. ಪಾಟೀಲ್, ಪ್ರೊ। ಮಲ್ಲೇದೇವರು, ಎನ್. ಕೆ. ಕುಲಕರ್ಣಿ, ಡಿ. ವಿ. ರಾವ್ – ಮುಂತಾದ ಮಹನೀಯರುಗಳು ತಮ್ಮ ಅಮೂಲ್ಯವಾದ ಲೇಖನಗಳನ್ನು ನೀಡಿದ್ದಾರೆ.

ಚಂದ್ರಿಕೆ ನೀಡಿದ ಧಾರಾವಾಹಿಗಳು

ಚಂದ್ರಿಕೆಯಲ್ಲಿ ಧಾರಾವಾಹಿಯಾಗಿ ಬರುತ್ತಿದ್ದ ಕಾದಂಬರಿಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿಯೂ ಉತ್ತಮ ಧಾರ್ಮಿಕ, ರಾಷ್ಟ್ರೀಯ ಪುಸ್ತಕಗಳನ್ನು ಹೊರತರಲು 'ಶ್ರೀ ಶೇಷಾಚಲ ಗ್ರಂಥಮಾಲೆ' ಜನ್ಮತಾಳಿದ್ದೂ ಆನಂದವನದಲ್ಲಿಯೇ. ಇಲ್ಲಿ ಪ್ರಕಟವಾದ ಐತಿಹಾಸಿಕ ಕಾದಂಬರಿಗಳು, ಜನತೆಯ ದೇಶಾಭಿಮಾನವನ್ನು ಜಾಗೃತಗೊಳಿಸಿವೆ. ಐತಿಹಾಸಿಕ ಕಾದಂಬರಿಗಳಲ್ಲದೇ ಧಾರ್ಮಿಕ, ಸಾಮಾಜಿಕ ಕಾದಂಬರಿಗಳೂ ಇಲ್ಲಿ ಪ್ರಕಟವಾಗಿವೆ. ವೀರ ಸಾವರಕರ್‌ರ 'ಕರಿನೀರು' (ಕಾಲಾಪಾನಿ) ಪ್ರಕಟವಾದುದು ಆನಂದವನದಿಂದಲೇ. ನಿನ್ನೆಯ ಹಿರಿಯ ಸಾಹಿತಿಗಳು ಆನಂದವನದ ಪ್ರಕಟಣೆಗಳಿಂದಲೇ ಪ್ರೇರಣೆ ಪಡೆದವರು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು!

ಪ್ರಥಮ ಸಂಪಾದಕರಾಗಿದ್ದ ಶ್ರೀ ಎಲ್ಗೋ ಗುಡ್ಡೋ ಕುಲಕರ್ಣಿಯವರು ವೃದ್ಧಾಪ್ಯದಿಂದಾಗಿ ಸಂಪಾದಕತ್ವದ ಜವಾಬ್ದಾರಿಯನ್ನು ಶ್ರೀ ಜಿ. ಎಚ್. ಹೊಸೂರು ಮಾಸ್ತರರಿಗೆ ಒಪ್ಪಿಸಿದರು. ಹೊಸೂರರು ಕೆಲಕಾಲ ನಡೆಸಿದ ನಂತರ, ಆ ಕಾರ್ಯವನ್ನು ಮುಂದುವರಿಸಿದವರು ಶ್ರೀ ರಾಮಚಂದ್ರ ಕುಲಕರ್ಣಿಯವರು. ಅವರ ನಂತರ ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡವರು ಇಂದಿನ ಆನಂದವನದ ಗುರುಗಳೂ, ಸದ್ಯದ ಚಂದ್ರಿಕೆಯ ಸಂಪಾದಕರೂ ಆಗಿರುವ 'ಗುರುವರ್ಯ ಶ್ರೀ ಚಿದಂಬರ ಮೂರ್ತಿಜಿ ಚಕ್ರವರ್ತಿ'ಯವರು.

ವೈಯಕ್ತಿಕ ಕಾರಣಗಳಿಂದಾಗಿ ಶ್ರೀ ಭೀ. ಪ. ಕಾಳೆಯವರು, ಯಲ್ಲಪ್ಪನವರ ಕಾಲದಲ್ಲಿಯೇ ಆನಂದವನವನ್ನು ಬಿಟ್ಟು ಧಾರವಾಡಕ್ಕೆ ಹೋದರು. ಈ ವೇಳೆಗಾಗಲೇ ಶ್ರೀ ಶೇಷಾಚಲ ಮುದ್ರಣಾಲಯದ ಒಡೆಯರೂ ಅವರೇ ಆಗಿದ್ದರು. ಅವರೊಟ್ಟಿಗೆ ಮುದ್ರಣಾಲಯವೂ ಆನಂದವನದಿಂದ ಹೊರಟು ಹೋಯಿತು. ಆಗ ಚಂದ್ರಿಕೆ ಮತ್ತೊಮ್ಮೆ ತಬ್ಬಲಿಯಾಗಿದ್ದಾಳೆ, ಮುದ್ರಣಕ್ಕಾಗಿ ಗದಗ, ಹುಬ್ಬಳ್ಳಿ, ಹಾವೇರಿಗಳಿಗೆ ಪರದಾಡಿದ್ದಾಳೆ.


ಚಿದಂಬರ ಮೂರ್ತಿಗಳು, ಈ ತೆರನಾಗಿ ಬೇರೆ ಮುದ್ರಣಾಲಯಗಳಲ್ಲಿ ಅಚ್ಚುಹಾಕಿ, ಚಂದ್ರಿಕೆಯನ್ನು ಪುನರುಜ್ಜೀವನಗೊಳಿಸುವದು ಅಸಾಧ್ಯವೆಂದಾಗ, ಒಂದರೆ ಕ್ಷಣವನ್ನು ವ್ಯಯಮಾಡದೆ, ಈಗ್ಗೆ 15 ವರ್ಷಗಳ ಹಿಂದೆಯೇ ಶ್ರೀ ಶೇಷಾಚಲ ಸದ್ಗುರು ಮುದ್ರಣಾಲಯವನ್ನು ಸ್ಥಾಪಿಸಿದರು ಹಾಗೂ ಈಗ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಆ ಪ್ರೆಸ್ಸನ್ನು ಹಿರಿಯದಾಗಿ ವಿಸ್ತರಿಸಿದ್ದಾರೆ.

ಮುದ್ರಣಯಂತ್ರ ಮತ್ತು ಚಂದಾದಾರರು

ಈಗೆರಡು ವರ್ಷಗಳಿಂದ ತರಿಸಬೇಕು, ತರಿಸಬೇಕು ಎಂದು ಹಾಡುತ್ತಾ ಬಂದಿದ್ದ ಎರಡು ಯಂತ್ರಗಳನ್ನು ಅಂದರೆ ಪ್ರಿಂಟಿಂಗ್ ಮೆಷಿನ್ ಹಾಗೂ ಕಟ್ಟಿಂಗ್ ಮೆಷಿನ್ ಎಂಬವೆರಡನ್ನು ಚಂದ್ರಿಕೆಯು ಸರಾಸರಿ 2,800 ರೂ.ಗಳನ್ನು ಕೊಟ್ಟು ಒಮ್ಮೆಲೇ ಗಟ್ಟಿಮನಸ್ಸು ಮಾಡಿ ತರಿಸಿಬಿಟ್ಟಳು.

"ನೀನು ಹೊತ್ತಿಗೆ ಸರಿಯಾಗಿ ಬರುವುದಿಲ್ಲ, ನಿನ್ನ ಮುದ್ರಣ ಕೆಲಸವು ನೆಟ್ಟಗಾಗುವುದಿಲ್ಲ" ಎಂದು ಚಂದಾದಾರರ ಕೈಯಿಂದ ಅನಿಸಿಕೊಂಡು ಸಾಕಾಗಿದ್ದ ಚಂದ್ರಿಕೆಗೆ ಇತ್ತ ಬಿದ್ದರೆ ಕೆರೆ, ಅತ್ತ ಬಿದ್ದರೆ ಬಾವಿ ಎಂಬ ಗತಿಯಾಗಿತ್ತು. ಏಕೆಂದರೆ 8,000 ಪ್ರತಿಗಳನ್ನು ಕೈಪ್ರೆಸ್ಸಿನ ಮೇಲೆ ಹೊತ್ತಿಗೆ ಸರಿಯಾಗಿ ಮುದ್ರಿಸುವದು ಅಸಾಧ್ಯವಾದ್ದರಿಂದ ಮೇಲೆ ಹೇಳಿದ ಎರಡು ಯಂತ್ರಗಳನ್ನು ತರಿಸದಿದ್ದರೆ ಆಕೆಗ ಬೈಸಿಕೊಳ್ಳುವದು ತಪ್ಪುವ ಹಾಗಿರಲಿಲ್ಲ. ಹೊಸ ಯಂತ್ರಗಳನ್ನು ತರಿಸಿಬಿಡಬೇಕೆಂದರೆ ಕೈಯಲ್ಲಿ ದುಡ್ಡು ಇದ್ದಿಲ್ಲ. ಹೀಗಾಗಿ ಅಪ್ರಬುದ್ಧಳಾದ ಚಂದ್ರಿಕೆಯು ಉಸುರ್ಗರೆಯುತ್ತಾ "ಏನು ಮಾಡಬೇಕು? ಹ್ಯಾಗೆ ಮಾಡಬೇಕು" ಎಂಬ ದ್ವಾದಶಾಕ್ಷರೀ ಜಪಿಸುತ್ತಾ, "ದೇವರೇ ಇಷ್ಟು ಜನ ಚಂದಾದಾರರಾದರೂ ಯಾಕೆ ಕೂಡಿದ್ದಾರು! ಎಷ್ಟಂತ ಅವರಿಗೂ ನಮಗೂ ತ್ರಾಸು" ಎಂದು ಪಶ್ಚಾತ್ತಾಪ ಪಡುತ್ತಾ ಏನೂ ತೋಚದೆ ಸುಮ್ಮನೇ ಕುಳಿತುಕೊಳ್ಳುತ್ತಿದ್ದಳು.

[1914ನೆಯ ಇಸವಿಯ ಒಂದು ಸಂಚಿಕೆಯಲ್ಲಿ ಗಳಗನಾಥರು ಸಂಪಾದಕೀಯ ರೂಪದಲ್ಲಿ ಬರೆದುದು.]




ಶ್ರೀ ಶೇಷಾಚಲ ಸ್ವಾಮಿಗಳು



ಶ್ರೀ ಚಿದಂಬರ ಸ್ವಾಮಿಗಳು

ಯಿಂದಲೇ ಇವರು ಬಂದವರು. ಗಳಗನಾಥರು ಕೂಡಾ ತಮ್ಮ ಶಾಲೆಯ ಅಧ್ಯಾಪಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟೇ ಆನಂದವನಕ್ಕೆ ಬಂದು ಸ್ವಾಮಿಯ ಸೇವೆಗೆ ನಿಂತರು. ಇವರೆಲ್ಲ ಅಂದು ನಿಸ್ವಾರ್ಥ ಸೇವೆಯ ದೃಷ್ಟಿಯಿಂದ ಕಾರ್ಯ ಮಾಡಿದ್ದಾರೆ.

ಆಗ ತಂದಿದ್ದ ಮುದ್ರಣ ಯಂತ್ರ ಆಗಿನ ಕಾಲದಲ್ಲಿ ಲಭ್ಯವಿದ್ದ ಉತ್ತಮ ಯಂತ್ರವಾಗಿತ್ತು. ಚಂದ್ರಿಕೆಯ ಬೇಡಿಕೆ ಆಗ 14,000 ಪ್ರತಿಗಳಿಗೇರಿದಾಗ ಈ ಮುದ್ರಣ ಯಂತ್ರವೂ ಪೂರೈಸದಾಗದೆ, ಅಂಥ ಒಂದು ಸಂದರ್ಭದಲ್ಲಿ ಗಳಗನಾಥರು ತಮ್ಮ ಗೋಳನ್ನು ಹೀಗೆ ತೋಡಿಕೊಂಡಿದ್ದಾರೆ. "......ದೇವರೇ, ಇಷ್ಟು ಜನ ಚಂದಾದಾರರಾದರೂ ಯಾಕೆ ಕೂಡಿದ್ದಾರು! ಎಷ್ಟಂತ ಅವರಿಗೂ ನಮಗೂ ತ್ರಾಸ......" ಎಂದು ಮುಂತಾಗಿ ಹೇಳಿಕೊಂಡಿದ್ದಾರೆ.



ಈಗ ಲಭ್ಯವಿರುವ ಅತ್ಯಂತ ಹಳೆಯ ಸದ್ಬೋಧ ಚಂದ್ರಿಕೆಯ ಹೊದಿಕೆಯ ಚಿತ್ರ. (ಎರಡನೇ ವರ್ಷದ ಪ್ರಥಮ ಸಂಚಿಕೆ)

ಆ ಕಾಲದಲ್ಲಿ ಚಂದ್ರಿಕೆಯ ಜನಪ್ರಿಯತೆ ಎಷ್ಟಿತ್ತೆಂದರೆ, ಬೇಡಿದಷ್ಟು ಪ್ರತಿಗಳು ಸಿಗದಿದ್ದಾಗ ಹಳ್ಳಿಗರು ಅವರಲ್ಲಿಗೆ ಬರುತ್ತಿದ್ದ ಒಂದೇ ಪ್ರತಿಯನ್ನು ಒಂದು ಕಟ್ಟೆಯ ಮೇಲೆ ಕುಳಿತು ಸಾಮೂಹಿಕವಾಗಿ ಓದಿದ ಉದಾಹರಣೆಗಳಿವೆ.

ಈ ತಲೆಮಾರಿನ ಹಿರಿಯ ಸಾಹಿತಿಗಳು ತಮ್ಮ ಸಾಹಿತ್ಯಜೀವನದ ವಿಷಯವಾಗಿ ಹೇಳಹೊರಟರೆ – ಬಹುಜನ ಸಾಹಿತಿಗಳು – ಸದ್ಬೋಧ ಚಂದ್ರಿಕೆ – ಗಳಗನಾಥರ ವಿಷಯವಾಗಿ ಹೇಳಬೇಕಾಗುವದು ಸಹಜ. ಆ ಸಮಯದಲ್ಲಿ ಚಂದ್ರಿಕೆ ಅಂತಹ ಮಹತ್ವದ ತಳಹದಿಯ ಕಾರ್ಯವನ್ನು ಮಾಡಿದೆ.

ಸದ್ಬೋಧ ಚಂದ್ರಿಕೆಯ ಕುರಿತು ಶ್ರೀರಂಗರು

ಈ ಸಂದರ್ಭವನ್ನು ಕುರಿತು ಶ್ರೀರಂಗರು (ಆದ್ಯ ರಂಗಾಚಾರ್ಯರು) ಒಂದೆಡೆ ಬರೆದುದನ್ನು ಇಲ್ಲಿ ನೆನೆಸಿಕೊಂಡರೆ ಆ ಚಿತ್ರ ನಮ್ಮ ಕಣ್ಣೆದುರು ನಿಲ್ಲುತ್ತದೆ.

"ಸದ್ಬೋಧ ಚಂದ್ರಿಕೆ! 60–62 ವರ್ಷಗಳ ಹಿಂದಿನ ನೆನಪು! ನಾನಾಗ ವಿಜಾಪುರ ಹೈಸ್ಕೂಲಿನಲ್ಲಿ 6ನೆಯ ಈಯತ್ತೆಯ ವಿದ್ಯಾರ್ಥಿಯಾಗಿದ್ದೆ. ನನ್ನ ಇಂಗ್ಲಿಷ್ ಜ್ಞಾನ ಸುಧಾರಿಸಬಹುದೆಂಬ ಆಶೆಯಿಂದ ನಗರದ ಅಂದಿನ ನೇಟಿವ್ ಜನರಲ್ ಲೈಬ್ರರಿಯಲ್ಲಿ ಇಂಗ್ಲಿಷ್ ಕಾದಂಬರಿಗಳನ್ನು ಓದುತ್ತಿದ್ದೆ. ಶಬ್ದಕೋಶದ ಸಹಾಯವಿಲ್ಲದೆ ಭಾಷೆಯೂ ಪೂರ್ತಿಯಾಗಿ ತಿಳಿಯುತ್ತಿರಲಿಲ್ಲ. ಕಾದಂಬರಿಗಳಲ್ಲಿಯ ಸಾಮಾಜಿಕ ಜೀವನ ಬೇರೆ ತರದ್ದಾದ್ದರಿಂದ ಕತೆಯ ಸ್ವಾರಸ್ಯವೂ ತಿಳಿಯುತ್ತಿರಲಿಲ್ಲ. ಇತ್ತ ಬಾಲಕನೂ ಅಲ್ಲ, ಅತ್ತ ಪ್ರೌಢನೂ ಅಲ್ಲ. ಅಂತಹ ವಯಸ್ಸಿನಲ್ಲಿದ್ದ ನನಗೆ ಬೇರೆ ಸಮಾಜದ ಜೀವನ ಚಿತ್ರಣದಲ್ಲಿ ಅಭಿರುಚಿ ಹೇಗೆ ಹುಟ್ಟಬೇಕು? ಆ ವಾಚನಾಲಯದಲ್ಲಿ ಅನೇಕ ವರ್ಷಗಳಿಂದ ಲೈಬ್ರೇರಿಯನ್ ಆದ ನರಸಪ್ಪ ಎಂಬ ಒಬ್ಬನಿದ್ದ. 400–600 ಪುಟಗಳ ಇಂಗ್ಲಿಷ್ ಕಾದಂಬರಿಯನ್ನು 4–6 ದಿನಗಳಲ್ಲಿ ವಾಪಸು ಮಾಡುತ್ತಿದ್ದ ನನಗಾಗಿ ಆತನಲ್ಲಿ ಕನಿಕರ ಮೂಡಿತೇನೋ? "ನಿನಗೆ ಕಾದಂಬರಿಗಳನ್ನು ಓದ

ಡಾ॥ ಶ್ರೀನಿವಾಸ ಹಾವನೂರರು ಸ. ಚಂದ್ರಿಕೆಯ ಹಳೆಯ ಸಂಚಿಕೆಯಿಂದ ಚಂದಾದಾರರು ಸಂಪಾದಕರಿಗೆ ಬರೆದ ಪತ್ರಗಳನ್ನ ಶೇಖರಿಸಿದ್ದಾರೆ. ಅವುಗಳಲ್ಲಿಯ ಕೆಲವು ಇವು:

"ಕುಮುದಿನಿ ಕಾದಂಬರಿಯನ್ನು ನಾಲ್ಕು ಜನ ಮಿತ್ರರು ಕೂಡಿ ಓದುತ್ತಿದ್ದೆವು. ಅದರೊಳಗಿನ 'ಅಂತಕನ ಕೋಲಾಹಲ' ಎಂಬ ಹನ್ನೆರಡನೆಯ ಪ್ರಕರಣವನ್ನು ಓದುವಾಗ ಅದರೊಳಗಿನ ಚೆನ್ನ ಓಬಲನ ಕ್ರೂರತನವನ್ನೂ ದುಃಖದ ಪ್ರಸಂಗವನ್ನೂ ಓದಿ. ನಮ್ಮೊಳಗಿನ ಮಿದುಳಿನ ಅಶಕ್ತತೆಯಿಂದ ಒಬ್ಬ ಮಿತ್ರರು ಮೂರ್ಛಿತರಾದರು. ಯೋಗ್ಯ ಉಪಚಾರದಿಂದ ಅವರು ಎಚ್ಚೆತ್ತ ಮೇಲೆ ಕಾದಂಬರಿಯನ್ನೇ ಮುಟ್ಟದಾದರು. ಚೆನ್ನ ಓಬಲನೆಂಬ ವ್ಯಕ್ತಿಯ ಕ್ರೂರತನವು ನಿಜವಾಗಿ ಒದಗಿದ್ದೇ ಆಗಿದ್ದರೆ ಆ ನೀಚನು ಈವೊತ್ತಿಗೂ ರೌರವ ನರಕದಲ್ಲಿರಬಹುದು. ಆದರೆ ಚಂದ್ರಿಕೆಯೇ ಆ ಹೃದಯವಿದ್ರಾವಕ ಪ್ರಸಂಗವನ್ನು ಕಲ್ಪಿಸಿದ್ದರೆ ಆಕೆಯು ಪ್ರಾಯಶ್ಚಿತ್ತವನ್ನು ತಕ್ಕೊಳ್ಳಬೇಕಾದೀತು. ● **ಎಂ. ಗಣೇಶರಾವ್ ಕ್ಲಾರ್ಕ್**

ಜೋಗಿಮಠ, ವಿಟ್ಲ

* * *

"ಚಂದ್ರಿಕೆಯು ಹ್ಯಾಗೇ ಇರಲಿ, ಪದ್ಮನಯನಾ ಎಂಬ ಕೀರ್ತಿಶಾಲಿ ಮಗಳನ್ನು ಹಡೆದಿದ್ದಾಳೆ. ಈ ಉಭಯ ಸ್ತ್ರೀಯರನ್ನೂ ಪುರುಷರು ಸ್ತೋತ್ರ ಮಾಡಿ ಸಹಾಯ ಮಾಡಲು ಮುಂದೆ ಬಂದದ್ದರಲ್ಲಿ ನನಗೇನೂ ಮಹತ್ವ ಕಾಣುವದಿಲ್ಲ. ಸ್ತ್ರೀಯರು ಪುರುಷನನ್ನು, ಪುರುಷರು ಸ್ತ್ರೀಯರನ್ನು ವರ್ಣನೆ ಮಾಡುವದು ಸಹಜವೇ. ಅದಿರಲಿ, ನನಗೆ ಎಂಥಾ ತ್ರಾಸವಿದ್ದರೂ ಅವರಿಬ್ಬರನ್ನೂ ನೆನೆದರೆ ಸಾಕು ಈ ಉಭಯೇತರರನ್ನು ಕಳಿಸಿಕೊಡುವ ದೆಸೆಯಿಂದ ಪತ್ರಹಾಕಿದ್ದು ಇನ್ನೂ ಕಳಿಸಿಕೊಡಲಿಲ್ಲ. ನಮ್ಮ ತಂಗಿಯರಾದ ಚಂದ್ರಿಕೆ, ಪದ್ಮನಯನಾ ಇವರನ್ನು ಕೂಡಲೇ ಕಳಿಸಿಕೊಡಬೇಕು.

● **ಯಮುನಾಸಾನಿ (!) ನಾಯ್ಕಿನ್**

ಕಾಮನಕಟ್ಟಿ ಧಾರವಾಡ

* * *

"ಚಂದ್ರಿಕೆಯು (ಬೆಳದಿಂಗಳು) ಸದಾ ಆಶ್ರಿತಳು. ಚಂದ್ರನ ವೃದ್ಧಿ – ಕ್ಷಯವನ್ನನುಸರಿಸಿ ತನ್ನ ಶಕ್ತಿಯನ್ನು ತೋರಿಸುವಳು. ಈ ಸದ್ಬೋಧ ಚಂದ್ರಿಕೆಯಾದರೂ ವೃದ್ಧಿಯನ್ನು ಮಾತ್ರ ಹೊಂದುತ್ತಿರುವ ಗ್ರಂಥಕರ್ತರೆಂಬ ಶುಕ್ಲಪಕ್ಷದ ಚಂದ್ರನನ್ನೇ ಆಶ್ರಯಿಸಿರುವುದರಿಂದ ನಿರಾತಂಕವಾಗಿ ತನ್ನ ಸಾಮರ್ಥ್ಯವನ್ನು ಪ್ರಕಟಿಸುವಳು. ಈ ಚಂದ್ರಿಕೆಗೆ ಮಾತ್ರ ಯಾವಾಗಲೂ ಶುಕ್ಲಪಕ್ಷದ ಪೌರ್ಣಿಮೆಯೇ ಇರಲಿ"

● **ವೈ. ಕೃಷ್ಣಶಾಸ್ತ್ರಿ ಶೃಂಗೇರಿ**

* * *

[ಸ. ಚಂದ್ರಿಕೆಯ ಅಮೃತ ಮಹೋತ್ಸವದ ಕಾಣಿಕೆ 'ಆನಂದವನ' ಗ್ರಂಥದಲ್ಲಿ " 'ಚಂದ್ರಿಕೆ' ಎತ್ತಿ ಮುಂದ್ಹಾಡಿಸಿದ ಚಂದಾದಾರರು" ಎಂಬ ಡಾ। ಹಾವನೂರರ ಬರೆಹದಿಂದ ಆಯ್ದುಕೊಳ್ಳಲಾಗಿದೆ.]

ಬೇಕಾಗಿದ್ರ ಇಂಥಾದ್ದನ್ನು ಓದು, ತಿಳಿದೀತು, ಮನಸ್ಸಿಗೆ ಹಿಡಿದೀತು" ಎಂದು ಸದ್ಬೋಧ ಚಂದ್ರಿಕೆಯ ಒಂದು ಸಂಚಿಕೆಯನ್ನು ಕೊಟ್ಟ. ಅದರಲ್ಲಿ "ಈಶ್ವರೀ ಸೂತ್ರ" ಎಂಬ ಕಾದಂಬರಿ ಧಾರಾವಾಹಿಯಾಗಿ (ಆಗ ಈ ಶಬ್ದ ಬಳಕೆಯಲ್ಲಿರಲಿಲ್ಲ) ಪ್ರಕಟವಾಗುತ್ತಿತ್ತು. ಓದತೊಡಗಿದೆ. ನರಸಪ್ಪನ ಹೇಳಿಕೆ ನಿಜವಾಯಿತು. 'ತಿಂಗಳಾ ಬರ್ತದ, ತಿಂಗಳಾ ಕೊಡತೀನಿ. ಆದರೆ ಅದನ್ನು ಬೇಡುವವರು ಬಹಳ ಜನ. ನಿನ್ನ ಪಾಳಿ ಬಂದಾಗ ಕೊಡತೀನಿ' ಎಂದ. ಆ ಕಾದಂಬರಿಯನ್ನು ನಾನು ಎಷ್ಟು ಮೆಚ್ಚಿದ್ದೆ ಎಂದರೆ ನನ್ನ ಪಾಳಿಯನ್ನು ಬೇಗ ತರಿಸಲು ನರಸಪ್ಪನಿಗೆ ತಿಂಗಳೂ ಎರಡಾಣೆ ಚಹಾಕ್ಕೆಂದು ಕೊಡುತ್ತಿದ್ದೆ (ಆಗ ಲಂಚದ ಪ್ರಮಾಣವೂ ತೀರಾ ಚಿಕ್ಕದಿತ್ತು). ಅಂದಿನಿಂದ ಪ್ರತೀ ತಿಂಗಳೂ 'ಸದ್ಬೋಧ ಚಂದ್ರಿಕೆ' ಬಂದೊಡನೆಯೇ ಅಂಚೆಯವನ ದಾರಿ ಕಾಯುತ್ತಿದ್ದೆ. ಎರಡಾಣೆ ಕೊಟ್ಟು ಅದರಲ್ಲಿಯ ಕಥಾಭಾಗವನ್ನು ಎರಡು ಸಲ ಓದಿ ತಿರುಗಿ ಕೊಡುತ್ತಿದ್ದೆ.

"ಇಂದು ಆ ಮಾತನ್ನು ನೆನೆದರೆ ಅದರ ಮಹತ್ವ ಹೊಳೆಯುವದು. ಕನ್ನಡದಲ್ಲಿ ಓದಲು ಲಲಿತ ಸಾಹಿತ್ಯ ಏನೂ ಇಲ್ಲದ ಆ ದಿನಗಳಲ್ಲಿ 14–15 ವಯಸ್ಸಿನ ಬಾಲಕರಿಗೆ ತಿಳಿಯುವಂತಹ ಭಾಷೆಯಲ್ಲಿ ನಿರರ್ಗಳ ಪ್ರವಾಹದಂತೆ ಹರಿಯುವ ಶೈಲಿಯಲ್ಲಿ ಕುತೂಹಲವನ್ನು ಕೆಣಕುವಂತಹ ತಂತ್ರದಲ್ಲಿ ಕಾದಂಬರಿಗಳನ್ನು – ಅವೂ ಐತಿಹಾಸಿಕ, ವೀರರ ಸಾಹಸದ ಕತೆ ಬರೆದು ಕನ್ನಡವನ್ನು ಓದುವಂತೆ ನೂರಾರು ವಾಚಕ ವರ್ಗಗಳನ್ನು ಅಸ್ತಿತ್ವದಲ್ಲಿ ತಂದ ಗಳಗನಾಥರ ಕೊಡುಗೆ ಇಂದಿನ ಸಾಹಿತ್ಯದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿದೆ. ಕನ್ನಡ ಶಾಲೆಯ ಅಧ್ಯಾಪಕರಾದ ನನ್ನ ತಂದೆ 'ಗಳಗನಾಥ ಎಂದರೆ ವೆಂಕಟೇಶ ತಿರಕೋ ಕುಲಕರ್ಣಿ ಎಂಬ ಹೆಸರಿನ ಕನ್ನಡ ಶಾಲೆಯ ಅಧ್ಯಾಪಕರು' ಎಂದು ಹೇಳಿದಾಗ ನನ್ನಲ್ಲಿ ಅವರ ಬಗ್ಗೆ ಒಂದು ಆತ್ಮೀಯತೆಯೂ ಮೂಡಿತು. ಇದಲ್ಲದೇ ಇನ್ನೂ ಒಂದು ಮಾತನ್ನು ಇಲ್ಲಿ ಹೇಳಬಹುದು. ಅವರ ಅನೇಕ ಕಾದಂಬರಿಗಳು ಮರಾಠಿ ಕಾದಂಬರಿಗಳ ರೂಪಾಂತರ ಎಂದು ತಿಳಿಯಲು ನನಗೆ ಎಷ್ಟೋ ವರ್ಷಗಳು ಬೇಕಾದವು. ಅಲ್ಲಿಯ ವರೆಗೆ ನಾನು ಅವು ಸ್ವತಂತ್ರ ಕಾದಂಬರಿಗಳು ಎಂದೇ ತಿಳಿದಿದ್ದೆ. ಗಳಗನಾಥರ ಲೇಖನ ಚಾತುರ್ಯ ಅಂತಹದಾಗಿತ್ತು! ಗಳಗನಾಥರ ಸರಳ ಶೈಲಿ, ಕಥೆಯನ್ನು ಕಟ್ಟುವ ಜಾಣ್ಮೆ, ವಾಚಕರ ಕುತೂಹಲವನ್ನು ಕೆರಳಿಸುವ ತಂತ್ರ, ಮುಖ್ಯವಾಗಿ ಓದುಗನಲ್ಲಿ ತನ್ನ ಸಮಾಜದ ಬಗ್ಗೆ, ತನ್ನ ದೇಶದ ಇತಿಹಾಸದ ಬಗ್ಗೆ ಜ್ಞಾನ ಮತ್ತು ಅಭಿಮಾನ ಏಕಕಾಲಕ್ಕೇ ಮೂಡಿಸುವಂತಹ ದೃಷ್ಟಿ ಇಂದಿಗೂ ನಾವು ಇನ್ನೊಬ್ಬ ಲೇಖಕನಲ್ಲಿ ಕಾಣದವರಾಗಿದ್ದೇವೆ".

ಕೃಷ್ಣಮೂರ್ತಿ ಪುರಾಣಿಕರು 'ಸದ್ಬೋಧ ಚಂದ್ರಿಕೆ'ಯ ಬಗ್ಗೆ

"... ಈ ಶತಮಾನದ ಪ್ರಾರಂಭದ ಕಾಲದಲ್ಲಿ ಕನ್ನಡ ಭಾಷೆಗೆ ತನ್ನದಾದ ಗೌರವ ಸ್ಥಾನವಿರಲಿಲ್ಲ. ಕನ್ನಡ ಭಾಷೆಯ ಬಗ್ಗೆ ಕನ್ನಡಿಗರಿಗೇ ಅಭಿಮಾನವಿರಲಿಲ್ಲ! ಕನ್ನಡ ಜನತೆಗೆ ಓದಬೇಕೆಂದರೆ ಸಾಹಿತ್ಯ ಪುಸ್ತಕಗಳೂ ಸಿಗುತ್ತಿರಲಿಲ್ಲ, ಇದೊಂದು ಕನ್ನಡ ಜನತೆಗೆ ಕತ್ತಲೆಯ ಕಾಲವೆಂದರೂ ಅದು ಕತ್ತಲೆ ಹರಿಯುವ ಕಾಲವೂ ಆಗಿತ್ತೆನ್ನಬಹುದು.

ಡಾ. ಮಾಸ್ತಿ ಕಂಡ ಅಗಡಿಯ ಸಾಧುಗಳು

'ಸಾಧುಗಳು ಗುರುಪದಕೆ ಏರಿದರು ಇದನು ನಾನರಿಯೆ ಬಹು ಹಿಂದೆಯೇ ಇವರ ಸೌಜನ್ಯ ಆಚಾರ ಸೌಶೀಲ್ಯವನು ಕಂಡು ನಮ್ಮ ಜನ ಈ ಮಹಾತ್ಮರು ಶ್ರೀ ಚಿದಂಬರನ ಅಪರಾವತಾರ ಎಂದರು......'

('ನವರಾತ್ರಿ'ಯಿಂದ ಆಯ್ದುದ್ದು)

"ಕನ್ನಡನಾಡು ಬೇರೆ ಬೇರೆ ಆಡಳಿತಗಳಲ್ಲಿ ಹಂಚಿ ಹೋಗಿತ್ತು. ಮುಂಬೈ ಪ್ರಾಂತದಲ್ಲಿ, ಮದ್ರಾಸ್ ಪ್ರಾಂತದಲ್ಲಿ ಹಾಗೂ ಮೈಸೂರು ಸಂಸ್ಥಾನದಲ್ಲಿ ಕನ್ನಡ ತಾಯಿಯ ಅಂಗಾಂಗಗಳು ಪಸರಿಸಿ ಯಾವ ಪುಷ್ಟಿಯೂ ಸಿಗದೆ ರೋಗಗ್ರಸ್ತವಾಗಿದ್ದಳು. ಮೈಸೂರು ಸಂಸ್ಥಾನದಲ್ಲಿ ಕನ್ನಡ ಕೆಲಸ ನಡೆಯುತ್ತಿತ್ತು. ಆದರೂ ಆಡಳಿತ



ಶ್ರೀ ಶೇಷಾಚಲ ಸಾಧುಗಳ 'ಆನಂದವನ'

ದಲ್ಲಿ ಮುಖ್ಯವಾಗಿ ಬಂದ ಬೇರೆ ಭಾಷೆಯ ದಿವಾನರ ವರ್ಚಸ್ಸಿನ ಪರಿಣಾಮವಾಗಿ ತೆಲುಗು, ತಮಿಳು ಭಾಷೆಗಳು ನೆಲೆಯೂರತೊಡಗಿದ್ದವು......

"ಮುಂಬೈ ಪ್ರಾಂತದಲ್ಲಿ ಪ್ರಬಲವಾದ ಗುಜರಾಥಿ–ಮರಾಠಿ ಭಾಷೆಗಳ ಹಿರಿಮೆ–ಗರಿಮೆಗಳ ಓಟದಲ್ಲಿ ಕನ್ನಡವು ತಲೆಯೆತ್ತಲೂ ವಿಶೇಷ ಅವಕಾಶವೇ ಇರಲಿಲ್ಲ. ಅದರಲ್ಲೂ ಮರಾಠಿ ಭಾಷೆಯ ಪ್ರಭಾವವು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಬೀಳಹತ್ತಿತು......

"... ಸಂಪೂರ್ಣ ಮರಾಠಿ ವಾತಾವರಣದಲ್ಲಿ ಬೆಳೆದು ಬಂದ ಈ ಯುವಕರು ಕನ್ನಡವೆಂದರೆ ಮೂಗು ಮುರಿಯುತ್ತಿದ್ದರು......

"... ಕನ್ನಡದ ಗಣಿಯಲ್ಲಿದ್ದ ಚಿನ್ನ ಇವರ ಪಾಲಿಗೆ ಕಬ್ಬಿಣವಾಗಿತ್ತು......

"... ಎಲ್ಲದಕ್ಕೂ ಕಾಲ ಒದಗಿಬರಬೇಕು, ಕಾಲ ಪಕ್ವವಾಗಬೇಕು, ಪ್ರೇರಣೆಯೊಂದೇ ಸಾಲದು, ಪ್ರೇರಣೆಯ ಹಿಂದೆ ಪರಮಾತ್ಮನ ಅನುಗ್ರಹ ಬೇಕು!

"ಗಳಗನಾಥರು ಗುತ್ತಲದಲ್ಲಿರುವಾಗ ಸಮೀಪದಲ್ಲಿರುವ ಅಗಡಿಯ ಶ್ರೀ ಶೇಷಾಚಲ ಸ್ವಾಮಿಗಳನ್ನು ಗುರುಗಳಂತೆ ನೋಡತೊಡಗಿದರು. ಆಗಾಗ ಅವರೊಡನೆ ಸಂಭಾಷಿಸುತ್ತಿದ್ದರು. ಚರ್ಚೆ ಮಾಡುತ್ತಿದ್ದರು. ಪರಸ್ಪರರು ತಮ್ಮನ್ನು ಅರಿತುಕೊಂಡರು. ಗಳಗನಾಥರಂತೂ ಶ್ರೀ ಶೇಷಾಚಲ ಸ್ವಾಮಿಗಳಿಂದ ಬಹಳಷ್ಟು ಪ್ರಭಾವಿತರಾದರು. ಈ ಪ್ರಭಾವವು ಕನ್ನಡ ಸಾಹಿತ್ಯಕ್ಕೆ ಸಂಕೇತ ರೂಪವಾಗಿತ್ತು......

"ಸದ್ಬೋಧ ಚಂದ್ರಿಕೆಯ ಪ್ರಾರಂಭಕ್ಕೆ ಶ್ರೀ ಶೇಷಾಚಲ ಸದ್ಗುರುಗಳು ಕಾರಣರಾದರು (1903).

"... ಸದ್ಬೋಧ ಚಂದ್ರಿಕೆ ಮಾಡಿದ ಮಹತ್ಕಾರ್ಯವೆಂದರೆ, ಅದು ಇಪ್ಪತ್ತನೆಯ ಶತಮಾನದ ಆರಂಭದ ಕಾಲದಲ್ಲಿ ಕನ್ನಡ ಜನತೆಯಲ್ಲಿ ಹೊಸಗನ್ನಡ ಸಾಹಿತ್ಯದ ಅಭಿರುಚಿಯನ್ನು ಉಂಟು ಮಾಡಿದ್ದು! ಇದು ಸಾಮಾನ್ಯ ಶ್ರೇಯಸ್ಸಲ್ಲ. ಇನ್ನೊಂದು ಮಹತ್ವದ ಅಂಶವೆಂದರೆ: 'ಸದ್ಬೋಧ ಚಂದ್ರಿಕೆ'ಯು ಕೇವಲ ಗಳಗನಾಥರನ್ನಷ್ಟೆ ವಿಜೃಂಭಿಸಲಿಲ್ಲ. ಅನೇಕ ಕನ್ನಡ ಕತೆಗಾರರನ್ನೂ ಕಾದಂಬರಿಕಾರರನ್ನೂ ಸೃಷ್ಟಿಸಿತು. ಹೊಸ ಪೀಳಿಗೆಯ ಬರಹಗಾರರಿಗೆ ಸ್ಫೂರ್ತಿಯ ಸೆಲೆಯಾಯಿತು.

"... ಕನ್ನಡದ ಹೆಣ್ಣುಮಕ್ಕಳಲ್ಲಿ ಸಾಹಿತ್ಯ ವಾಚನಾಭಿರುಚಿಯನ್ನು ಹುಟ್ಟಿಸಿ, ಅವರಲ್ಲಿ ಕೆಲವರನ್ನಾದರೂ ಬರಹದಲ್ಲಿ ಆಸಕ್ತಿ ಹೊಂದುವಂತೆ ಮಾಡಿದ ಶ್ರೇಯಸ್ಸು 'ಸದ್ಬೋಧ ಚಂದ್ರಿಕೆ'ಯದು.


"... ಒಂದು ತಲೆಮಾರಿನ ಸಾಹಿತಿಗಳು ಹೆಚ್ಚಾಗಿ ಕತೆಗಾರರು, ಕಾದಂಬರಿಕಾರರು 'ಚಂದ್ರಿಕೆ'ಯ ಪ್ರೇರಣೆಯಿಂದ ಬೆಳೆದವರು ಬೆಳೆಯುತ್ತಲೂ ಇದ್ದಾರೆ...... ಸದ್ಬೋಧ ಚಂದ್ರಿಕೆಯ ಸ್ಫೂರ್ತಿ ನಿರಂತನ, ಸತ್ಯ ಚಿರಂತನ, ಪ್ರೇರಣೆ ಅಬಾಧಿತ!........."

ಕೃಷ್ಣಮೂರ್ತಿ ಪುರಾಣಿಕರಂತೆ – ಆ ತಲೆಮಾರಿನ ಸಾಹಿತಿಗಳು ಚಂದ್ರಿಕೆಯಿಂದಲೇ ಪ್ರೇರಣೆ ಹೊಂದಿದವರೆಂದು ಹೇಳಬೇಕು.


"ನನ್ನಲ್ಲಿ ಸಾಹಿತ್ಯ ಪ್ರೀತಿಯನ್ನು ಹುಟ್ಟಿಸಿ, ನಾನು ಕಾದಂಬರಿಕಾರನಾಗಲು ಮೂಲ ಪ್ರೇರಣೆಯೊದಗಿಸಿದ ಕೀರ್ತಿ ಗಳಗನಾಥರ ಪದ್ಮನೆಯದು. ಮನೆಯ ಪಡಸಾಲೆಯಲ್ಲಿ ಹೊಗೆಕಾರುವ ಚಿಮಣೀ ದೀಪದೆದುರು ಕುಳಿತು ರಾತ್ರಿ ಇಡೀ ನಿದ್ರೆಗೆಟ್ಟು ಆ ಕಾದಂಬರಿಯನ್ನೋದಿ ಮುಗಿಸಿದ್ದೆ......" ಎಂದು ಬಸವರಾಜ ಕಟ್ಟೀಮನಿ ತಮ್ಮ ಬಾಲ್ಯವನ್ನು ನೆನಸಿ ಹೇಳಿದ್ದಾರೆ. ●

ಈ ಬರೆಹದಲ್ಲಿ ಬಂದ ಮಹನೀಯರ ನುಡಿಗಳನ್ನು ಚಂದ್ರಿಕೆಯ ಅಮೃತ ಮಹೋತ್ಸವ ಅಮರ ಕಾಣಿಕೆಯಾದ 'ಆನಂದವನ' ಗ್ರಂಥದಿಂದಲೇ ಆಯ್ದುಕೊಳ್ಳಲಾಗಿದೆ. ಈ ಮಹೋತ್ಸವ ಆನಂದವನದಲ್ಲಿ ಇದೇ ಎಪ್ರಿಲ್ 20ರಂದು ನಡೆಯಲಿದೆ. ಹೊತ್ತಿಗೆಯನ್ನು ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ಬಿಡುಗಡೆ ಮಾಡಲಿರುವರು.

ವಿಳಾಸ: ಸದ್ಬೋಧ ಚಂದ್ರಿಕೆ
ಅಂಚೆ: ಆನಂದವನ (ಅಗಡಿ)
ತಾಲೂಕು: ಹಾವೇರಿ
ಜಿಲ್ಲೆ: ಧಾರವಾಡ



ಸಂದರ್ಶನ



"ಚಿತ್ರಕಲೆಯಲ್ಲಿ ಭಾರತೀಯತ್ವ ಎಂಬ ಮಾತು ಹುರುಳಿಲ್ಲದ್ದು"

ಕೆ.ಕೆ.ಹೆಬ್ಬಾರ್

- ಸಂದರ್ಶಕರು : ವ್ಯಾಸರಾಯ ಬಲ್ಲಾಳ
- ಫೋಟೋಗಳು : ಎನ್. ಸಿ. ದೇಸಾಯಿ

ಕಟ್ಟಿಂಗೇರಿ ಕೃಷ್ಣ ಹೆಬ್ಬಾರ, ಚಿತ್ರಕಲೆಯ ಜಗತ್ತಿನಲ್ಲಿ ಒಂದು ಹೆಸರಷ್ಟೇ ಅಲ್ಲ; ಒಂದು ಆದರ್ಶ. ಭೌಗೋಲಿಕ ಗಡಿ ದಾಟಿದ ಕರ್ನಾಟಕದ ಪ್ರತಿಭೆ. ವಿಶ್ವಮಾನ್ಯ ಕಲಾವಿದರ ಸಾಲಿನಲ್ಲಿ ನಿಲ್ಲುವ ಯೋಗ್ಯತೆಯಿರುವ ಕೆಲವೇ ಭಾರತೀಯ ಕಲಾವಿದರಲ್ಲಿ ಹಿರಿಯರಾದ ಹೆಬ್ಬಾರರು ಇಂದು ಕೇಂದ್ರದ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಪದದ ಗೌರವವನ್ನೂ ಪಡೆದಂಥವರು. ನಾಡಿನ ಸಾಂಸ್ಕೃತಿಕ ಬದುಕನ್ನು ಪೋಷಿಸಬೇಕಾದ ಈ ಸಂಸ್ಥೆಯ ಚುಕ್ಕಾಣಿ ಹಿಡಿದು ನಮ್ಮ ಚಿತ್ರಕಾರರಿಗೆ ಮಾರ್ಗದರ್ಶನ ಮಾಡುತ್ತಿರುವ ಹೆಬ್ಬಾರರಿಗೆ ಕಲೆಯೇ ಜೀವನ, ಜೀವನವೆ ಕಲೆ. ಅವರ ವಿಶಿಷ್ಟ ಪ್ರತಿಭೆ, ಮಾಗಿದ ಅನುಭವಗಳ ಪರಿಚಯ ಮಾಡಿಕೊಡುವ ಸಂದರ್ಶನವಿದು — 'ತರಂಗ'ಕ್ಕಾಗಿ ವಿಶೇಷ.

ಹೆಬ್ಬಾರರ ರೇಖಾಚಿತ್ರಗಳು ಅವರೇ ಬರೆದ 'ಸಿಂಗಿಂಗ್ ಲೈನ್ಸ್', ಅಂಬಿಕಾತನಯದತ್ತರ 'ಒಲವೆ ನಮ್ಮ ಬದುಕು' ಸಂಗ್ರಹದಿಂದ ಮತ್ತು ಡಾ. ಶಿವರಾಮ ಕಾರಂತರು ಬರೆದ 'ಕಲಾವಿದ ಕೃಷ್ಣ ಹೆಬ್ಬಾರರು'.

ಹೆಬ್ಬಾರರೆ, ರವಿವರ್ಮನ ಅನುಕರಣೆಯಿಂದ ಆರಂಭಿಸಿ, ಕಲಾತ್ಮಕವಾದ ಅಮೂರ್ತ ಭಾವಾಭಿವ್ಯಕ್ತಿಯ ಆದರೆ ಅಚ್ಚ ಭಾರತೀಯವೆನಿಸುವ ನಿಮ್ಮ ಮಹತ್ವದ ಇಂದಿನ ಚಿತ್ರಗಳ ತನಕ ನೀವು ನಡೆದು ಬಂದ ದಾರಿಯಲ್ಲಿ ನಿಮಗೆ ದೊರಕಿದ ಅನುಭವದಿಂದ, ಒಂದು ಸಮಕಾಲೀನ ಕಲಾಕೃತಿಯ ಯೋಗ್ಯತೆಯನ್ನು ಅಳೆಯಲು ಯಾವ ಮಾನದಂಡ ಅನುಸರಿಸುವುದು ಸೂಕ್ತವೆಂದು ನಿಮಗನ್ನಿಸಿದೆ?


— ತುಂಬ ವ್ಯಾಪಕವಾದ ಪ್ರಶ್ನೆ ಇದು. ಬೊಟ್ಟಿಟ್ಟು ಇಂಥದೇ ಮಾನದಂಡ ಸೂಕ್ತ ಎಂದು ಹೇಳುವುದು ಕಷ್ಟ. ಆದರೆ ಒಂದು ಕಲಾಕೃತಿಯ ಯೋಗ್ಯತೆಯನ್ನು ನಿರ್ಧರಿಸುವುದು ಮುಖ್ಯವಾಗಿ ಅದರಲ್ಲಿ ಕಲಾವಿದ ತನ್ನನ್ನು ತೊಡಗಿಸಿಕೊಂಡ ಬಗೆ ಮತ್ತು ಅದರಲ್ಲಿ ಅಭಿವ್ಯಕ್ತವಾಗುವ, ಆತನ ಮನಸ್ಸಿನ ಆಂತರಿಕ ಒತ್ತಡದಿಂದ ಪ್ರೇರಿತವಾದಂಥ ಸೃಜನಶೀಲತೆ. ಈ ಸೃಜನಶೀಲತೆ ಔಪಚಾರಿಕವಾದ ಕಲಾಶಿಕ್ಷಣದಿಂದಲೆ ಬರುವಂಥದಲ್ಲ. ಅದು ತನ್ನಷ್ಟಕ್ಕೆ ತಾನೆ ಎಂಬಂತೆ ಜರಗುವ ಕ್ರಿಯೆ. ಈ ಕ್ರಿಯೆಯನ್ನು ಪೋಷಿಸಬೇಕಾದದ್ದು ಆತನ ಪ್ರಾಮಾಣಿಕವಾದ ಸಂವೇದನೆ. ಜಾನಪದ ಕಲೆಯಲ್ಲಿ ನೀವು ಕಾಣುವುದೇನನ್ನು? ಎದೆಯಾಳದ ಭಾವನೆಗಳಿಗೆ ರೂಪ ಕೊಡಲು ಯತ್ನಿಸುವಂಥ ಅನಿರ್ಬಂಧಿತ, ಸ್ವಚ್ಛಂದ ಅಭಿವ್ಯಕ್ತಿಯನ್ನು. ಇಂದಿನ ಕಲಾವಿದನಿಗೆ ಸ್ವಚ್ಛಂದ ಅಭಿವ್ಯಕ್ತಿಯಷ್ಟೆ ಉದ್ದೇಶವಲ್ಲ, ನಿಜ. ಆತನ ಚಿತ್ರ ರಚನೆಗೆ, ಇತರರು ತನ್ನ ಚಿತ್ರಗಳನ್ನು ನೋಡಿ ಸಂತೋಷಪಡಬೇಕು ಎಂಬ ಪ್ರದರ್ಶನಾಕಾಂಕ್ಷೆಯೂ ಇದೆ. ಆದರೆ ನಾವು ಒಂದು ಕಲಾಕೃತಿಯ ಯೋಗ್ಯತೆಯನ್ನು ನಿರ್ಧರಿಸುವಾಗ, ಮುಖ್ಯವಾಗಿ ಗಮನಿಸಬೇಕಾದದ್ದು ಕೃತಿ ರಚನೆಗೆ ಕಾರಣವಾಗಿರಬಹುದಾಗಿದ್ದ ಸಂವೇದನೆ ಮತ್ತು ಜಾನಪದ ಕಲೆಯಲ್ಲಿರುವಂಥ ಸ್ವಪ್ರೇರಣೆಯ ಅನಿರ್ಬಂಧಿತ ಸೃಜನಶೀಲತೆ.

● **ಪಾಶ್ಚಾತ್ಯ ಚಿತ್ರಕಲೆಯ ತಂತ್ರ, ಶೈಲಿಗಳ ವರ್ಚಸ್ಸನ್ನೂ, ಭಾರತೀಯ ಚಿತ್ರಕಲೆಯ ಮೂಲಭೂತ ತತ್ವಗಳನ್ನೂ ಬೆರೆಸಿ ತನ್ನ ಮಾಧ್ಯಮವನ್ನು ಕಂಡುಕೊಂಡ ಅಮೃತಾ ಶೇರ್‌ಗಿಲ್‌ಳ ಪ್ರಭಾವ ಒಮ್ಮೆ ನಿಮ್ಮ ಮೇಲಾಗಿದೆಯೆಂದು ನೀವೇ ಒಪ್ಪಿಕೊಂಡಿದ್ದೀರಿ. ಇಂದು ಹಲವಾರು ಕಲಾವಿದರ ಕೃತಿಗಳನ್ನು ವಿಮರ್ಶಿಸುವ ವಿಮರ್ಶಕರು, ಪಾಶ್ಚಾತ್ಯ ಶೈಲಿಗಳ ವರ್ಚಸ್ಸಿನಿಂದ ಪ್ರಭಾವಿತರಾದ ಕಲಾವಿದರು ಅನುಕರಣೆಯಲ್ಲೆ ಸಾಫಲ್ಯ ಕಂಡುಕೊಂಡು ಭಾರತೀಯ ಸಂದರ್ಭಕ್ಕೆ ಸಹಜವೆನಿಸುವ ಚಿತ್ರ ರಚಿಸುತ್ತಿಲ್ಲವೆನ್ನುತ್ತಿದ್ದಾರೆ. ಈ ಮಾತು ಸರಿಯೆ? ಭಾರತದ ಆಧುನಿಕ ಚಿತ್ರಕಲೆಯ ಮೇಲೆ ಪಾಶ್ಚಾತ್ಯ ಚಿತ್ರಕಲೆಯ ವರ್ಚಸ್ಸು ಎಷ್ಟರಮಟ್ಟಿಗಿದೆ?**


ಅನುಕರಣೆಯಲ್ಲೆ ಸಾಫಲ್ಯ ಕಂಡುಕೊಳ್ಳುವವರು ಸೃಜನಶೀಲ ಪ್ರತಿಭೆಯನ್ನು ಮೆರೆಸುವ ಮಾತೇ ಇಲ್ಲ.

> **"ಪೌರ್ವಾತ್ಯ ಚಿತ್ರ ಸಂಪ್ರದಾಯಗಳೆಲ್ಲ ಎಂದೋ ಮುಗಿದಿವೆ. ಅಲ್ಲಿ ಅಭ್ಯಾಸ ಮಾಡುವಂಥದೇನೂ ಇಲ್ಲ."**

ಆದರೆ ಪಾಶ್ಚಾತ್ಯ ಶೈಲಿಗಳಿಂದ ಪ್ರಭಾವಿತರಾದವರೆಲ್ಲ ಅನುಕರಣೆಯಲ್ಲೆ ತೃಪ್ತಿ ಪಡುತ್ತಾರೆನ್ನುವುದು ತಪ್ಪು. ಎಲ್ಲ ಲಲಿತ ಕಲೆಗಳ ಮಾಧ್ಯಮಗಳಂತೆ ಚಿತ್ರಕಲೆಯಲ್ಲೂ ಕಾಳು ಕಡಮೆ, ಜೊಳ್ಳು ಹೆಚ್ಚು. ಹಾಗೆಂದ ಮಾತ್ರಕ್ಕೆ ಕಾಳೇ ಇಲ್ಲವೆಂದಲ್ಲ. ಪಶ್ಚಿಮದಿಂದ ಬಂದ ಬಣ್ಣಗಾರಿಕೆಯ ತಂತ್ರ, ಅದರಿಂದ ದೊರಕುವ ಹಲವಾರು ಸಾಧ್ಯತೆಗಳು, ಬಣ್ಣದಿಂದಲೆ ದೊರಕಿಸಿಕೊಳ್ಳುವ ಬಂಧ ವಿನ್ಯಾಸ, ಸಾಂದ್ರತೆ, ವಿಸ್ತಾರದ ಕಲ್ಪನೆ ಇವೆಲ್ಲವುಗಳ ಕುರಿತ ತಿಳಿವಳಿಕೆ ಸೃಜನಶೀಲ ಕಲಾವಿದನಿಗೆ ನೆರವು ಕೊಡುವಂಥವು. ಪಶ್ಚಿಮದಲ್ಲಿ ಚಿತ್ರಕಲೆಯ ಪರಂಪರೆಗೆ ಇರುವ ಐತಿಹಾಸಿಕವೆನಿಸುವ ಗತಿ ನಮ್ಮಲ್ಲಿಲ್ಲ. ಪೌರ್ವಾತ್ಯ ಚಿತ್ರಕಲೆ ಆದರ್ಶಮಯವಾದದ್ದು. ಪಶ್ಚಿಮದಲ್ಲಿ ಅದು ವಾಸ್ತವಿಕತೆಯನ್ನೆ ಆಶ್ರಯಿಸಿದ್ದು. ನಮ್ಮ ಚಿತ್ರಕಲೆಯ ಪರಂಪರೆ ಅಲಂಕಾರಿಕ ಹಾಗೂ ವಿವರಣಾತ್ಮಕವಾದದ್ದು.



ಮೊಮ್ಮಗನೊಡನೆ ಆಟದಲ್ಲಿ ಮಗ್ನರಾದ ಕಲಾವಿದ ದಂಪತಿಗಳು. ಶ್ರೀಮತಿ ಸುಶೀಲಾ ಹೆಬ್ಬಾರ, ಮೊಮ್ಮಗ ನೀಹಾರ (ಎರಡನೆಯ ಮಗಳು – ರಜನಿಯ ಮಗ) ಶ್ರೀ ಹೆಬ್ಬಾರ.



ಹೆಬ್ಬಾರ ಕುಟುಂಬದ ಆಲ್ಬಮ್ (ಎಡದಿಂದ) ಕಲಾವಿದ ಹೆಬ್ಬಾರ, ಶ್ರೀಮತಿ ಸುಶೀಲಾ ಹೆಬ್ಬಾರ, ಮಗ ರನ್ನ, ಕಲಾವಿದೆ ರೇಖಾ ಹಾಗೂ ಕಲಾಶಿಕ್ಷಕಿ ರಜನಿ.

ಗೆಯೇ ವಿಶಿಷ್ಟ ಗುಂಪುಗಳಿಗೆ ಸಂಬಂಧಿಸಿದಂಥಾದ್ದು. ದರೆ ನಾವು ಕೆಲವು ವಿಶಿಷ್ಟ ಕಾಲದ ಪರಿಮಿತಿಗೆ ಒಳ ಟ್ಟ ರಜಪೂತ, ಜೈನ, ಮೊಗಲ್ ಚಿಕಣಿ ಚಿತ್ರಗಳನ್ನು ಯುತ್ತೇವೆ. ಇವೆಲ್ಲ ಕಲೆಯ ಒಂದು ಪರಂಪರೆಯನ್ನೆ ಷ್ಟಿಸಿದಂಥವಲ್ಲ. ರಜಪೂತ ಅಥವಾ ಜೈನ ಚಿಕಣಿ ತ್ರಗಳಲ್ಲಿ ಕಾಣುವ ಮುಗ್ಧತೆ ಜಾನಪದ ಕಲೆಗೆ ಸಮೀಪ ದದ್ದು. ಮುಂದೆ ಪರ್ಸಿಯಾದ ಕಾವ್ಯ, ಅಲಂಕಾರ ಗೆ ಸಂಬಂಧಿಸಿದ ಅಂಶಗಳಿಂದ ಪ್ರಭಾವಿತವಾದ ೂಗಲ್ ಚಿಕಣಿ ಚಿತ್ರಗಳಲ್ಲಿ ಹೆಚ್ಚು ಕೌಶಲ್ಯವನ್ನು ಣುತ್ತೇವೆ. ಪಶ್ಚಿಮದಲ್ಲಿ ಪರಂಪರೆಯಿಂದ ಸಿಡಿದೇ ೂಸ ಸಾಧ್ಯತೆಗಳ ಪರಂಪರೆಯನ್ನು ಸೃಷ್ಟಿಸಿದ ಕಲೆಯ ತಿಹಾಸದಿಂದ, ಕಲಾವಿದರ ಕೃತಿಗಳಿಂದ ನಾವು ಕಲಿಯ ಹುದಾದುದೆಷ್ಟೋ ಇದೆ. ಇನ್ನು ನಿಮ್ಮ ಭಾರತೀಯತ್ವ ನ್ನುವ ಮಾತಿನಲ್ಲಿ ಹುರುಳಿಲ್ಲವೆಂದೆ ನನ್ನ ಅಭಿಪ್ರಾಯ.

● ಆದರೆ ನಿಮ್ಮ ಚಿತ್ರಗಳಲ್ಲಿ ಅಚ್ಚ ಭಾರತೀಯತ್ವವನ್ನು ುರುತಿಸಿದ್ದೇನೆ. ನಿಮ್ಮಿಂದಲೇ ಕಲಿಯುವುದಿದೆ, ಲ್ಲೇನು ಕಲಿಯಲು ಬಂದಿದ್ದೀರಿ ಎಂದು ಒಬ್ಬ ಫ್ರೆಂಚ್ ಮರ್ಶಕರೆ ಹೇಳಿದ್ದಾರಲ್ಲಾ?

— ನಿಜ. ಅವರಿಗೆ ಅಪರಿಚಿತವೆನಿಸುವ ಸಂಸ್ಕಾರವನ್ನು ಅವರು ಗುರುತಿಸಿದ್ದಾರೆಂದ ಮಾತ್ರಕ್ಕೆ ಚಿತ್ರಗಳಲ್ಲಿ ಭಾರತೀಯತ್ವದ ಕಲ್ಪನೆಯಿದೆ ಅಥವಾ ಚಿತ್ರಗಳಲ್ಲಿ ಭಾರತೀಯತ್ವ ಇರಬೇಕು ಎನ್ನುವ ಮಾತುಗಳೆಲ್ಲ ಸರಿಯಲ್ಲ. ಒಬ್ಬ ಕಲಾವಿದನ ಚಿತ್ರ ಆತನ ನಾಡಿನ ಜಾನಪದ ಕಲೆಯಿಂದ ಪ್ರಭಾವಿತವಾಗುವುದಾಗಲೀ ಆತನ ನಾಡಿನ ಸಂಸ್ಕಾರಗಳಿಂದ ಪ್ರಭಾವಿತವಾಗುವುದಾಗಲೀ ಆಶ್ಚರ್ಯದ ಮಾತಲ್ಲ. ಆದರೆ ಇಂಥ ಸಂಸ್ಕಾರಗಳನ್ನು ಸ್ವಾಭಾವಿಕವಾಗಿ ರೂಢಿಸಿಕೊಂಡು ಆತ ರಚಿಸುವ ಕಲಾಕೃತಿ, ಆತನ ಆಂತರಿಕ ಸಂವೇದನೆಯ ಒತ್ತಡದ ಪರಿಣಾಮವಾಗಿ ಹೊರಹೊಮ್ಮುವ ಸೃಜನಶೀಲತೆಯನ್ನೊಳಗೊಂಡಿದ್ದರೇನೇ ಆದಕ್ಕೆ ಮಾನ್ಯತೆ. ಕಲೆಯಲ್ಲಿ ಪೌರ್ವಾತ್ಯ, ಪಾಶ್ಚಾತ್ಯ, ಭಾರತೀಯ, ಅಭಾರತೀಯ ಎಂಬ ಲಕ್ಷಣಗಳನ್ನು ಸೂಚಿಸುವುದಕ್ಕಿಂತ, ಒಳ್ಳೆಯ ಅಥವಾ ಕೆಟ್ಟ ಚಿತ್ರವೇ, ಸೃಜನಶೀಲ ಹೌದೇ, ನಾವೀನ್ಯವುಳ್ಳದ್ದೇ ಎಂದು ಸೂಚಿಸುವುದೇ ಹೆಚ್ಚು ಯೋಗ್ಯವಾದದ್ದು.



ಸಂದರ್ಶಕ ವ್ಯಾಸರಾಯ ಬಲ್ಲಾಳರು ಹೆಬ್ಬಾರರೊಂದಿಗೆ ಕಲಾನಗರದ ಅವರ ಸ್ಟುಡಿಯೊದೊಳಗೆ.

ಸಾಂಪ್ರದಾಯಿಕ ಕಲೆ

● ಭಾರತೀಯ ಸಾಂಪ್ರದಾಯಿಕ ಚಿತ್ರಕಲೆಯ ಮೂಲಭೂತ ಅಂಶಗಳನ್ನೂ ನಮ್ಮ ಜಾನಪದ ಕಲೆಯ ವಿಶಿಷ್ಟ ಗುಣಗಳನ್ನೂ ನಿಮ್ಮ ಚಿತ್ರಗಳಿಗೆ ಅಳವಡಿಸಿಕೊಳ್ಳುವ ನೀವು ಪಾಶ್ಚಾತ್ಯ ಚಿತ್ರಕಲೆಯ ಯಾವ ಅಂಶಗಳು ಗ್ರಾಹ್ಯವೆಂದು ತಿಳಿದಿದ್ದೀರಿ?

— ನಾನು ಈ ಮೊದಲೇ ಹೇಳಿರುವಂತೆ, ಪರಿಮಿತಿ, ಗಾತ್ರಗಳ ಕಲ್ಪನೆಯಲ್ಲಿ, ವರ್ಣ ವಿನ್ಯಾಸದಲ್ಲಿ ನಾವು ಪಶ್ಚಿಮದಿಂದ ತಿಳಿದುಕೊಳ್ಳಬೇಕಾದ ಅಂಶಗಳೆಷ್ಟೋ ಇವೆ. ಬಣ್ಣವನ್ನು ಅಭಿವ್ಯಕ್ತಿಗಾಗಿ ಬಳಸುವುದರಲ್ಲಿ ಅವರು ತೋರಿರುವ ಜಾಣ್ಮೆ, ಪ್ರತಿಭೆ ನಮ್ಮ ಕಣ್ಣು ತೆರೆಸುವಂಥದ್ದು. ಅವರ ಚಿತ್ರಕಲೆಯಲ್ಲಿ ಕಾಣುವ ವಾಸ್ತವಿಕವೆನಿಸುವ ಭಾವಾಭಿವ್ಯಕ್ತಿಯ ರೀತಿ ಗ್ರಾಹ್ಯ ಅಂಶ. ನಮ್ಮ ಚಿತ್ರಕಲೆಯ ಪರಂಪರೆಯಲ್ಲಿ ಆದರ್ಶದಿಂದ ಕೂಡಿದ ಅಲಂಕಾರಿಕ ಹಾಗೂ ವಿವರಣಾತ್ಮಕ ಚಿತ್ರರಚನೆಯೆ ಪ್ರಧಾನವೆಂದು ಹಿಂದೆಯೇ ಹೇಳಿದ್ದೇನೆ. ಸಂಗೀತಕ್ಕೆ ಸಂಬಂಧಿಸಿದ ಕೆಲವು ರಾಗಗಳ ಚಿತ್ರಗಳನ್ನೇ ನೀವು ತೆಗೆದುಕೊಳ್ಳಿ. ಇಲ್ಲಿ ಯಾವುದೊಂದು ರಾಗಕ್ಕೆ ಮುಖ್ಯವೆನ್ನುವ ಸನ್ನಿವೇಶದ ಚಿತ್ರಣದಲ್ಲೆ ಕಲಾವಿದ ತೃಪ್ತ. ಆದರೆ ಆಧುನಿಕ ಚಿತ್ರಕಲಾವಿದ ಸಂಗೀತಕ್ಕೆ ಚಿತ್ರರೂಪದಲ್ಲಿ ಸ್ಪಂದಿಸುವ ಸೃಜನಶೀಲ ರೀತಿಯೆ ಬೇರೆ. ನಾನೇ ಸಂಗೀತಕ್ಕೆ ಸಂಬಂಧಿಸಿದ ಹಲವಾರು ಚಿತ್ರಗಳನ್ನು ಬರೆದಿದ್ದೇನೆ. ಬಣ್ಣದಲ್ಲೆ ಸಂಗೀತವನ್ನು ಕೇಳಿಸಲು ಅಲ್ಲ, ನೋಡಲು ಪ್ರಯತ್ನಿಸಿದ್ದೇನೆ. ನನ್ನ 'ಸಂಗೀತಕ್ಕೆ ನಮನ' ಎಂಬ ಚಿತ್ರದಲ್ಲಿ ಉಪಯೋಗಿಸಿರುವ ಹಳದಿ ಬಣ್ಣ ನಾದದಿಂದುಂಟಾದ ಉಲ್ಲಾಸದ ಸೃಷ್ಟಿಗೆ ಕಾರಣವಾಗಿದೆಯಾದರೆ, 'ವೀಣಾ' ಎಂಬ ಚಿತ್ರದಲ್ಲಿ



ಕುಣಿಯೋಣ ಬಾರಾ, ಕುಣಿಯೋಣ ಬಾ

ಉಪಯೋಗಿಸಿರುವ ನೀಲಿ ಹಸುರು ಬಣ್ಣ ಅದರ ನಾದ ತರಂಗಿತತೆಯ ಸೃಷ್ಟಿಗಾಗಿ ಬಳಸಿದ್ದು. ಸಂಗೀತಕ್ಕೆ, ಸಂಗೀತದ ನಾದ ಮಾಧುರ್ಯಕ್ಕೆ, ಅದರಿಂದ ದೊರಕುವ ರಸೋಲ್ಲಾಸಕ್ಕೆ ನನ್ನದೇ ಎನಿಸುವ ಪ್ರತಿಕ್ರಿಯೆಯನ್ನು, ಭಾವಾಭಿವ್ಯಕ್ತಿಯನ್ನು, ಈ ಸೃಜನಶೀಲ ಮಾಧ್ಯಮದ ಮೂಲಕ ಬಿಂಬಿಸುವಾಗ ನನಗೆ ಮುಖ್ಯವಾಗಿರುವುದು ನನ್ನ ಆಂತರಿಕ ಸಂವೇದನೆ. ನಾನು ಸಂಗೀತವನ್ನು ಕಣ್ಣಾರೆ ಕಾಣಲು ಚಿತ್ರ ಬರೆಯುತ್ತೇನೆ ಎಂದು ಹೇಳಿದ್ದು ಇದೇ ಕಾರಣಕ್ಕಾಗಿ. ಇಂಥ ಭಾವಾಭಿವ್ಯಕ್ತಿಯ ತಿಳಿವಳಿಕೆಗೆ ಪಾಶ್ಚಾತ್ಯ ಚಿತ್ರಕಲೆಯ ಜ್ಞಾನ ಸಹಾಯ ಮಾಡಿದೆ. ನನ್ನ ರೇಖೆಗಳನ್ನು ತುಂಬ ಮೆಚ್ಚಿಕೊಳ್ಳುವವರಿದ್ದಾರೆ. ನನ್ನ ಒಂದು ಪ್ರಕಟಿತ ಚಿತ್ರ ಸಂಗ್ರಹಕ್ಕೆ 'ಹಾಡುವ ರೇಖೆ'ಯೆಂದೆ ಹೆಸರು. ನಾನು ನೃತ್ಯಾಭ್ಯಾಸ ಮಾಡಿದಾಗ ಅದರ ಲಯ, ವಿನ್ಯಾಸಗಳಿಗೆ ಸ್ಪಂದಿಸಿದಾಗ, ಮುಂದೆ ಭಾರತದ ಶಿಲ್ಪಕಲೆಯ ಅಭ್ಯಾಸ ನಡೆಸಿದಾಗ ನನ್ನ ರೇಖೆಗಳಲ್ಲಿ ಭಾವಪುಷ್ಟಿ, ಭಾವ ಸಂಚಾರಗಳ ಆಸೆ ಬೆಳೆದಿತ್ತು. ಈ ತಿಳಿವಳಿಕೆ ಬೆಳೆಯಲು ಪಾಶ್ಚಾತ್ಯ ದೇಶಗಳ ಕಲಾಭಂಡಾರಗಳ ಅಭ್ಯಾಸವೂ ಸಹಾಯ ಮಾಡಿದೆ.

● ಆಕಾರವನ್ನೂ ವಸ್ತುವನ್ನೂ ಪ್ರತ್ಯೇಕಿಸಿ ಚಿತ್ರ ಬರೆಯುವ ರೀತಿ ಪಾಶ್ಚಾತ್ಯ ಮೂಲದ್ದಲ್ಲವೆ? ಭಾರತೀಯ ಚಿತ್ರಕಲೆಯಲ್ಲಿ ಈ ವೈಶಿಷ್ಟ್ಯ ಇದೆಯೇ ?

— ಈ ಮಾತು ಸರಿಯಲ್ಲ. ಆಕಾರ, ವಸ್ತು ಎರಡೂ ಹೊಂದಿಕೊಂಡರೇನೇ ಚಿತ್ರದ ಗುಣ ಹೆಚ್ಚುವುದು. ಎರಡೂ ಒಂದಕ್ಕೊಂದು ಪೂರಕ. ಒಂದಕ್ಕಿಂತ ಇನ್ನೊಂದು ಹೆಚ್ಚಲ್ಲ. ತಾಯಿ ಮಗುವನ್ನು ಮಡಿಲಲ್ಲಿ ಹಿಡಿದು ಮುದ್ದಾಡುವ ಒಂದು ಚಿತ್ರ. ಪ್ರಣಯಿ ಪ್ರಣಯಿನಿಯನ್ನು ತಬ್ಬಿ ಹಿಡಿಯುವ ಇನ್ನೊಂದು ಚಿತ್ರ. ಇವೆರಡು ಉದಾಹರಣೆಗಳನ್ನು ತೆಗೆದುಕೊಳ್ಳಿ. ಒಂದರಲ್ಲಿ ಮೃದುವಾದ ವಾತ್ಸಲ್ಯ, ಇನ್ನೊಂದರಲ್ಲಿ ಆಕರ್ಷಣೆಯ, ಮಿಲನದ ತೀಕ್ಷ್ಣ ಆಸಕ್ತಿ. ಇವುಗಳನ್ನು ಚಿತ್ರಿಸುವ ಕಲಾವಿದನಿಗೆ ಈ ಭಾವಗಳನ್ನು ಪ್ರಕಟಿಸುವ ಉದ್ದೇಶ ಮುಖ್ಯವಾಗುವಾಗ, ಆಕಾರ, ವಸ್ತು ಹೊಂದಿಕೊಳ್ಳುವುದು ಅನಿವಾರ್ಯವಾಗುವುದು. ಅಷ್ಟೇ ಅಲ್ಲದೆ, ಚಿತ್ರಕಲೆಗೆ, ಸಾಹಿತ್ಯದಂತೆ ವಸ್ತುವೇ ಅಗತ್ಯವೂ ಅಲ್ಲ. ಬಣ್ಣದಲ್ಲಿ, ಬೆಳಕಿನಲ್ಲಿ ಭಾವ ಮೂಡಿಸುವಾಗ ಅಂಥ ಸೃಜನಶೀಲತೆಗೆ ವಸ್ತುವೆಲ್ಲಿದೆ? ಮೋಡ ತುಂಬಿದ ಆಕಾಶದಲ್ಲಿ, ಮೋಡ ಚದುರಿ ಒಮ್ಮೆಗೇ ಬೆಳಕು ಮೂಡುವಾಗ ಹುಟ್ಟುವ ಉಲ್ಲಾಸದ ಭಾವಕ್ಕೆ ವಸ್ತುವೆಂದು ಕರೆಯುವಿರೆ! ಇಲ್ಲ. ಇದು ಸಾಹಿತ್ಯಕ್ಕೆ ವಸ್ತುವೆನಿಸದು, ಚಿತ್ರಕ್ಕೆ ಆಗಬಹುದು.

● ನೀವು ಚಿತ್ರಕಲೆಯ ಅಭ್ಯಾಸದ ದೃಷ್ಟಿಯಿಂದಲೇ ಫ್ರಾನ್ಸ್, ಇಂಗ್ಲೆಂಡ್ ಮೊದಲಾದ ದೇಶಗಳನ್ನು ಸಂದರ್ಶಿಸಿದ್ದೀರಿ. ನಿಮ್ಮ ಚಿತ್ರಗಳ ಪ್ರದರ್ಶನಕ್ಕಾಗಿ ಆಸ್ಟ್ರೇಲಿಯಾದ ತನಕ, ಪೌರ್ವಾತ್ಯ ದೇಶಗಳಿಗೂ ಭೇಟಿ ಕೊಟ್ಟಿದ್ದೀರಿ. ಹೀಗೆ ವಿಶ್ವಪರ್ಯಟನ ಮಾಡಿ, ಜಗತ್ತಿನ ಕಲಾಭಂಡಾರದ ಪರಿಚಯ ಮಾಡಿಕೊಂಡಿರುವ ನಿಮಗೆ, ಪೌರ್ವಾತ್ಯ ಚಿತ್ರ ಶೈಲಿಗಳ ಬಗ್ಗೆ ಏನೆನಿಸುತ್ತಿದೆ? ಅವುಗಳ ಕುರಿತ ತಿಳಿವಳಿಕೆ ನಮ್ಮಲ್ಲಿ ಸಾಕಷ್ಟು ಇದೆಯೆ?

— ಪೌರ್ವಾತ್ಯ ಚಿತ್ರ ಸಂಪ್ರದಾಯಗಳೆಲ್ಲ ಎಂದೋ ಮುಗಿದಿವೆ. ಅಲ್ಲಿ ಅಭ್ಯಾಸ ಮಾಡುವಂಥದೇನೂ ಇಲ್ಲ.

● ಆದರೆ ಅಲ್ಲಿನ ಜಾನಪದ ಕಲೆಯಿಂದ ಚಿತ್ರಕಲೆ ಎಷ್ಟರಮಟ್ಟಿಗೆ ಪ್ರಭಾವಿಸಲ್ಪಟ್ಟಿದೆಯೆಂದು ತಿಳಿಯುವುದು ಯೋಗ್ಯವಲ್ಲವೆ?

— ಇರಬಹುದು. ನಾನು ಜಾನಪದ ಕಲೆಯ ಬಗ್ಗೆ ಈ ಮಾತು ಹೇಳಿಲ್ಲ. ಅಲ್ಲಿ ಈಗ ಜೀವಂತ ಚಿತ್ರ ಸಂಪ್ರದಾಯಗಳಿಲ್ಲವೆಂದಷ್ಟೆ ಹೇಳಿದ್ದು. ಜಾನಪದ ಕಲೆ ವಿಶ್ವದಾದ್ಯಂತ ಸ್ವಯಂಸ್ಫೂರ್ತಿಯಿಂದ ಬಂದಂಥ, ಆಂತರಿಕ ಪ್ರೇರಣೆಯಿಂದ ಬಂದಂಥ ಅಭಿವ್ಯಕ್ತಿಯಾದ ಕಾರಣ ಅದರ ತಿಳಿವಳಿಕೆ ತಂದುಕೊಂಡು ಸೌಂದರ್ಯ ರಸಾಸ್ವಾದನೆ ಮಾಡಬಹುದು.

● ಎಂದರೆ ಜಾನಪದ ಕಲೆಗೆ ಯಾವ ಭೌಗೋಲಿಕ ಪರಿಮಿತಿಯೂ ಇಲ್ಲವೆಂದೆ ನಿಮ್ಮ ಅಭಿಪ್ರಾಯವೆ?

— ಹೌದು. ಅದು ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಅಂಥ ಭಾಗಗಳ ಪ್ರಾದೇಶಿಕ ಸಂಸ್ಕಾರಗಳಿಂದ ಪ್ರಭಾವಿತವಾಗಿರಬಹುದು. ಆದರೆ ಮೂಲತಃ ಅದು ಅಭಿವ್ಯಕ್ತಿ ಪ್ರಧಾನವಾದಂಥ ಕಲೆ. ಮಕ್ಕಳ ಮುಗ್ಧ ಚಿತ್ರಕಲೆಯ ಮಾದರಿಯದು.

ಪಾಶ್ಚಾತ್ಯ ಚಿತ್ರಕಲೆ

● ಮತ್ತೆ ಪಾಶ್ಚಾತ್ಯ ಚಿತ್ರಕಲೆಗೆ ಬರುತ್ತಿದ್ದೇನೆ. ಅಲ್ಲಿನ ವೀಕ್ಷಕನ ಸಾಮಾಜಿಕ ಸಂದರ್ಭವನ್ನೂ ಇಲ್ಲಿನ ವೀಕ್ಷಕನ ಸಾಮಾಜಿಕ ಸಂದರ್ಭವನ್ನೂ ಹೋಲಿಸಿ ನೋಡಿದಾಗ ನಿಮಗೇನನಿಸುತ್ತದೆ? ಎಲ್ಲ ಕಲಾವಿದರ ಚಿತ್ರರಚನೆ ಮೂಲತಃ ಆತ್ಮತೃಪ್ತಿಗಾದರೂ, ಅವರಿಗೂ ಚಿತ್ರ ನೋಡುವವರಿಗೂ ಮೂಡಿ ಬರಬೇಕಾದ ಸಂಬಂಧ ಭಾರತದಲ್ಲಿ ಸಾಕಷ್ಟಿದೆಯೆ?

— ನಮ್ಮ ಶಿಕ್ಷಣ ಪದ್ಧತಿಯಲ್ಲಿ ಆಮೂಲಾಗ್ರ ಸುಧಾರಣೆಯಾಗದೆ ಭಾರತದ ಪರಿಸ್ಥಿತಿ ಹೆಚ್ಚು ಸುಧಾರಿಸೀತು ಎಂದು ನನಗನಿಸುವುದಿಲ್ಲ. ಎಳೆಯ ವಯಸ್ಸಿನಲ್ಲಿ ಮಕ್ಕಳ ಮನಸ್ಸು, ನಿಸರ್ಗಕ್ಕೆ, ಬಾಹ್ಯ ಪ್ರಪಂಚದ ವಿಸ್ಮಯಕಾರಕ ಸನ್ನಿವೇಶಗಳಿಗೆ ಸ್ಪಂದಿಸಬೇಕಾದ ಸಂದರ್ಭದಲ್ಲಿ ಅನಗತ್ಯವಾದ ಭಾಷೆಗಳ, ಪಾಠಗಳ ಹೊರೆಯನ್ನೆ ಅವರ ತಲೆಯ ಮೇಲಿರಿಸುತ್ತಿದ್ದೇವೆ. ಅವರ ಸ್ವಚ್ಛಂದವೆನಿಸಬಹುದಾದ ಮನೋಲ್ಲಾಸಕ್ಕೆ ಅವಕಾಶವೇ ಇರದಂತೆ ಹಲವಾರು ನಿರ್ಬಂಧಗಳಿಂದ ಅವರ ಮನಸ್ಸನ್ನು ಸಂಕುಚಿತಗೊಳಿಸುತ್ತೇವೆ. ಇಂಥ ಪರಿಸ್ಥಿತಿಯಲ್ಲಿ ಚಿತ್ರ ನೋಡುವ ಸಂಸ್ಕಾರ ಹೇಗೆ ಬೆಳೆದೀತು! ನಾವು ನೆಚ್ಚಿಕೊಂಡಿರುವ ಪಾಶ್ಚಾತ್ಯ ಶಿಕ್ಷಣ ಕ್ರಮದಿಂದಲೂ ಸಾಕಷ್ಟು ಕೆಡುಕಾಗಿದೆ. ನಮ್ಮ ಜಾನಪದ ಸಂಸ್ಕಾರಗಳೆಲ್ಲ ಮರೆಯಾಗಿವೆ, ಆಗುತ್ತಿವೆ. ಹಿಂದೆ ನಮ್ಮ ಮಹಿಳೆಯರು ಪ್ರತಿಯೊಂದು ಕೌಟುಂಬಿಕ, ಸಾಮಾಜಿಕ ಸನ್ನಿವೇಶದಲ್ಲೂ ಹಾಡುವುದಿತ್ತು. ಈಗ ಹಾಡುವುದಿಲ್ಲ. ಈಗ ಹಾಡು ಶಾಸ್ತ್ರೀಯ ಸಂಗೀತಾಭ್ಯಾಸದಲ್ಲೆ ಮುಗಿಯುವುದಿದೆ. ರಂಗೋಲಿ ಬರೆಯುವ ಸಂಪ್ರದಾಯ ಕೂಡ ಇಂದು ಅದಕ್ಕಾಗಿಯೇ ತಯಾರಿಸಿದ ತಗಡಿನ ಅಚ್ಚುಗಳನ್ನು ಆಶ್ರಯಿಸುತ್ತದೆ. ಸ್ವತಂತ್ರ ಅಭಿವ್ಯಕ್ತಿಗೆ ಪ್ರೋತ್ಸಾಹ ಕೊಡುವಂಥ ಈ ಸ್ಥಿತಿಯಲ್ಲಿ ಬದಲಾವಣೆಯಾದರೆ, ಭಾರತದ



ಹೆಬ್ಬಾರರ ಇತ್ತೀಚಿನ ಕೃತಿ "ಹೊರರ್" (Horror)

ನೂ ಚಿತ್ರಗಳನ್ನು ನೋಡುವ, ಮೆಚ್ಚುವ
ಯತೆಯನ್ನು ಬೆಳೆಸಿಕೊಳ್ಳಬಹುದು.

**ರಿಯ ಕಲಾವಿದರ ಚಿತ್ರಗಳು ಸಾಮಾನ್ಯರಿಗೆ
ವುದಿಲ್ಲವೆಂಬ ಮಾತೊಂದಿದೆ. ಬಡ ಭಾರತದಲ್ಲಿ,
ಸಹಜ. ಹೀಗಿರುವುದರಿಂದ ನಿಮ್ಮಂಥ ಹಿರಿಯ
ದರ ಚಿತ್ರಗಳೆಲ್ಲ ಕೊಂಡುಕೊಳ್ಳುವ ಶಕ್ತಿಯಿರುವ
ಂತರಿಗೆ ಮೀಸಲೆ?**

ಮಾತು ಪೂರ್ತಿ ಸತ್ಯವಲ್ಲ. ಚಿತ್ರ ನೋಡುವ·
ವ ಸಹೃದಯತೆ ಬೆಳೆದಾಗ, ಒಳ್ಳೆಯ ಚಿತ್ರಗಳ
ಬೆಲೆಯ ಅಚ್ಚಿನ ಪ್ರತಿಗಳನ್ನು ಜನ ಕೊಳ್ಳುತ್ತಾರೆ.
ದರು ಶ್ರೀಮಂತರಿಗೇ ತಮ್ಮ ಚಿತ್ರಗಳನ್ನು ಮಾರ
ದು ಇಚ್ಛಿಸುವುದಿಲ್ಲ. ಅವರು ಹೆಚ್ಚು ಹೆಚ್ಚು ಜನ
ಚಿತ್ರಗಳನ್ನು ನೋಡಲು ಸಾಧ್ಯವಾಗುವ ಚಿತ್ರ
ಹಾಲಯಗಳಿಗೂ ಮ್ಯೂಸಿಯಮ್‌ಗಳಿಗೂ ಇಂಥ
ಗಳನ್ನು ಮಾರಲು ತಿಳಿಸುತ್ತಾರೆ. ಇದಕ್ಕಿಂತ ಹೆಚ್ಚು
ಕವಾಗಿ ಇಂಥ ಮ್ಯೂಸಿಯಂಗಳು, ಚಿತ್ರ ಸಂಗ್ರ
ಯಗಳು ದೇಶದ, ರಾಜ್ಯಗಳ ಎಲ್ಲ ಕಡೆಗಳಲ್ಲಿ
ವಂತೆ ಪ್ರಯತ್ನ ಅಗತ್ಯ. ಇದಕ್ಕೆ ಸರಕಾರದ ನೆರವು,
ಬೇಕು. ದೇಶದ ಬೇರೆ ಬೇರೆ ಭಾಗಗಳಲ್ಲಿ ಚಿತ್ರ
ಹಾಲಯಗಳು ತಲೆದೋರಿದರೆ, ಸ್ವಾಭಾವಿಕವಾ
ಚಿತ್ರ ನೋಡುವ ಅಭಿರುಚಿಯೂ ಬೆಳೆದೀತು.

**ವಿಶ್ವದ ಹಲವಾರು ಭಾಗಗಳಲ್ಲಿ ನೀವು ನಿಮ್ಮ ಚಿತ್ರ
ಪ್ರದರ್ಶನ ನಡೆಸಿದ್ದೀರಿ. ಅಸಂಖ್ಯ ಜನರು ನಿಮ್ಮ
ಗಳನ್ನು ಮೆಚ್ಚಿ ಕೊಂಡಾಡಿದ್ದಾರೆ. ಹೊರನಾಡು
ನಿಮ್ಮ ಚಿತ್ರ ಪ್ರದರ್ಶನಗಳ ಬಗೆಗೂ ಭಾರತದ
ರ್ಶನಗಳ ಬಗೆಗೂ ನಿಮ್ಮ ಅಭಿಪ್ರಾಯವೇನು?**

ನಾನು ಈಗ ಭಾರತದಲ್ಲೂ ಸಾಕಷ್ಟು ಆಸಕ್ತಿ ಬೆಳೆ
ತ್ತಿರುವುದನ್ನು ಕಾಣುತ್ತಿದ್ದೇನೆ. ನನ್ನ ಕಲಾಕೃತಿಗಳ
ಪ್ರಸಿದ್ಧಿಯೂ ಇದಕ್ಕೆ ಒಂದು ಕಾರಣವಿರ
ದು. ಮುಂಬಯಿಯಂಥ ದೊಡ್ಡ ಶಹರಗಳಲ್ಲಿ
ಪ್ರದರ್ಶನಗಳ ಕುರಿತು ಆಸಕ್ತಿ ಬೆಳೆಯುತ್ತಿದೆ.
ಅಪೇಕ್ಷಿತ ಪ್ರಮಾಣದಲ್ಲಿ ಬೆಳೆಯಬೇಕಾದರೆ
ಮೊದಲು ಹೇಳಿದಂತೆ ಹೆಚ್ಚು ಹೆಚ್ಚು ಚಿತ್ರ
ಹಾಲಯಗಳು ನಿರ್ಮಾಣವಾಗಬೇಕು. ಹೆಚ್ಚು
ಮ್ಯೂಸಿಯಂಗಳ ರಚನೆಯಾಗಬೇಕು. ಶಿಕ್ಷಣ
ಸುಧಾರಿಸಬೇಕು. ನೀವು ಚಿತ್ರ ನೋಡುವ
ದಯತೆಯ ಒಂದು ನಿದರ್ಶನ ಕೇಳಿದ್ದೀರಿ.
ನ್ ನಗರದಲ್ಲಿ ನನ್ನದೊಂದು ಪ್ರದರ್ಶನ
ಾಗ, ಅಲ್ಲಿಗೆ ಬಂದಿದ್ದ ಡೆನ್ಮಾರ್ಕಿನ ನವವಿವಾಹಿತ
ತಿಗಳಿಗೆ ನನ್ನದೊಂದು ಚಿತ್ರ ಕೊಳ್ಳುವ ಆಸೆ.
ಆಗಲೇ ಕೈರೋ ಸಂದರ್ಶನ ಮುಗಿಸಿ ತಮ್ಮ
ಮನೆಗೆಂದು ಒಂದು ಕಾರ್ಪೆಟ್ ಕೊಂಡಾಗಿತ್ತು.
ಹಣ 'ಡೈನಿಂಗ್ ಟೇಬಲ್'ಗೆಂದು ಅವರು
ಿಸಿದ್ದರು. ಈ ಚಿತ್ರ ಕೊಳ್ಳಲು ಸಾಕಷ್ಟು ಹಣ
ಲ್ಲ. ಆಗ ಆ ಯುವಕ ತನ್ನ ಮಡದಿಯೊಡನೆ ಆಡಿದ
ಈಗಲೂ ನನಗೆ ನೆನಪಿದೆ. "ನಾವು ಡೈನಿಂಗ್
ಲ್ ಸದ್ಯ ಖರೀದಿಸುವುದು ಬೇಡ. ಹಾಸು
ಿಯಲ್ಲಿ ಕುಳಿತೇ ಗೋಡೆಯ ಮೇಲಿರಿಸುವ
ರರ ಚಿತ್ರ ನೋಡುತ್ತ ಊಟ ಮಾಡೋಣ"
. ನನಗೆ ಆಗ ತುಸು ಅನುಕೂಲವಿದ್ದಿದ್ದರೆ ಆ
ನ್ನು ಅವರಿಗೆ ಉಚಿತವಾಗಿಯೇ ಕೊಡುತ್ತಿದ್ದೆ.

ಅಂಥ ಆಸಕ್ತಿ, ಸಹೃದಯತೆ ಬೆಳೆಯುವಂಥ ವಾತಾವರಣ ನಿರ್ಮಾಣವಾದರೆ ಭಾರತದ ಪರಿಸ್ಥಿತಿಯೂ ಸುಧಾರಿಸೀತು.


● ಸೃಜನಶೀಲ ಚಿತ್ರಕಲೆಯಲ್ಲಿ ಭಾರತೀಯ ಕಲಾವಿದ ಬದುಕು ಸಾಗಿಸುವುದು ಸಾಧ್ಯವೆ? ಬೇರೆ ದೇಶಗಳಲ್ಲಿರುವಂತೆ ನಮ್ಮಲ್ಲಿ ಚಿತ್ರಕಲೆಗೆ ಪ್ರೋತ್ಸಾಹವಿದೆಯೆ? ಹೀಗಿರುವಾಗ ನೋಡುವವರ, ಬೇಡುವವರ ಅಭಿರುಚಿಯ ಜತೆ ರಾಜಿ ಮಾಡಿಕೊಂಡು ಚಿತ್ರ ಬರೆಯುವುದು ಹೆಚ್ಚಿನ ಕಲಾವಿದರಿಗೆ ಅಗತ್ಯವಾಗುವುದಿಲ್ಲವೆ?

> **"ಶಿಕ್ಷಣ ಪದ್ಧತಿಯಲ್ಲಿ ಆಮೂಲಾಗ್ರ ಸುಧಾರಣೆಯಾಗದೆ ಭಾರತದ ಪರಿಸ್ಥಿತಿ ಹೆಚ್ಚು ಸುಧಾರಿಸೀತು ಎಂದು ನನಗನಿಸುವುದಿಲ್ಲ."**

—ಸಾಧ್ಯ. ಬೇರೆ ದೇಶಗಳಲ್ಲಿರುವಷ್ಟಲ್ಲವಾದರೂ ನಮ್ಮಲ್ಲಿ ಪ್ರೋತ್ಸಾಹವೇ ಇಲ್ಲವೆಂದರ್ಥವಲ್ಲ. ಮುಖ್ಯ ಕಲಾವಿದನಾಗಿ ಜೀವನ ಸಾಗಿಸ ಬಯಸುವವನ ಕಲೆಯ ಕುರಿತ ನಿಷ್ಠೆ ಆದರ್ಶ ಪ್ರಾಮಾಣಿಕವಾಗಿರಬೇಕು. ಅಭಿರುಚಿಯ ಜತೆ ರಾಜಿ ಮಾಡಿಕೊಳ್ಳುವ ಪ್ರಶ್ನೆ ಕೇಳಿದ್ದೀರಿ. ತನ್ನ ಚಿತ್ರಗಳನ್ನು ಮೆಚ್ಚುವ ವ್ಯಕ್ತಿಗಳಿಗೋ, ಸಂಸ್ಥೆಗಳಿಗೋ ಬೇಕಾದ ಚಿತ್ರ ಬರೆಯುವುದರಲ್ಲಿ ರಾಜಿಯ ಪ್ರಶ್ನೆ ಬರುವುದಿಲ್ಲ. ಎಲ್ಲ ಕಲಾವಿದರಲ್ಲಿ ಅವರ ಸೃಜನಶೀಲತೆಯ ಸಂಸ್ಕಾರ ಅವರವರ ಪ್ರತಿಭೆ, ಯೋಗ್ಯತೆಗಳಿಗೆ ಹೊಂದಿಕೊಂಡು ವ್ಯಕ್ತವಾಗದೆ ಇಲ್ಲ. ಬೇಡಿದವರಿಗೆ ಒಂದು ಭಾವಚಿತ್ರ ಬರೆದರೆ, ಕೆಲೆಂಡರ್‌ಗಾಗಿ ಒಂದು ಚಿತ್ರ ರಚಿಸಿ ಕೊಟ್ಟರೆ, ಕಲಾವಿದ ತನ್ನ ಕಲೆಯನ್ನು ಕುಲಗೆಡಿಸಿದಂತಾಗುವುದಿಲ್ಲ. ಆತ ತನ್ನದೇ ಆದ ಸಂವೇದನೆಯ ಅಭಿವ್ಯಕ್ತಿಗಾಗಿ ಚಿತ್ರ ಬರೆಯುವಾಗ ರಾಜಿಯ ಪ್ರಶ್ನೆ ಉದ್ಭವಿಸುವುದಿಲ್ಲ.

● ಚಿತ್ರಕಲೆಗೆ ಸಂಬಂಧಿಸಿದಂತೆ ನಾಡಿನ ಅತ್ಯುನ್ನತ ಸಂಸ್ಥೆಯಾದ ಕೇಂದ್ರದ ಲಲಿತಕಲಾ ಅಕಾಡೆಮಿಯ ಅಧ್ಯಕ್ಷತೆ ವಹಿಸಿರುವ ನಿಮಗೆ ಅಕಾಡೆಮಿಯ ಕಾರ್ಯವಿಧಾನದ ಬಗ್ಗೆ ಸಂಪೂರ್ಣ ತೃಪ್ತಿ ಇದೆಯೆ? ನಮಗೆ ಸ್ವಾತಂತ್ರ್ಯ ಬಂದ ಮೇಲೆ ರಚಿಸಲ್ಪಟ್ಟ ಅಕಾಡೆಮಿಗಳು ಚಿತ್ರಕಲೆಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಏನು ಕೆಲಸ ಮಾಡಿವೆ?

—ಸಂಪೂರ್ಣ ತೃಪ್ತಿ ಯಾವಾಗಲೂ ಇರಬಾರದು. ನಾನು ಈಗ ಕೇಂದ್ರದ ಲಲಿತಕಲಾ ಅಕಾಡೆಮಿಯ ಕೆಲಸದಲ್ಲಿ ತುಂಬ ಆಸಕ್ತಿ ವಹಿಸಿರುವುದು ನಿಜ. ಸ್ವಾತಂತ್ರ್ಯ ಬಂದ ಮೇಲೆ, ಕಲೆಯ ಕುರಿತ ಜಾಗ್ರುತಿಯನ್ನುಂಟುಮಾಡುವುದರಲ್ಲೂ, ಕಲಾವಿದರಿಗೆ ವಿಶ್ವದ ಕಲಾಸಂಪತ್ತಿನ ಕುರಿತ ತಿಳಿವಳಿಕೆಯನ್ನುಂಟುಮಾಡುವುದರಲ್ಲೂ, ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಭಾರತೀಯ ಕಲಾವಿದರ ಚಿತ್ರ ಪ್ರದರ್ಶನಗಳಿಗೆ ನೆರವು ಕೊಡುವುದರಲ್ಲೂ ಕೇಂದ್ರದ ಲಲಿತಕಲಾ ಅಕಾಡೆಮಿ ಬಹಳಷ್ಟು ಕೆಲಸ ಮಾಡಿದೆ. ಮೂರು ವರ್ಷಗಳಿಗೊಮ್ಮೆ ಜರಗಿಸುವ ವಿಶ್ವ ಕಲಾ ಪ್ರದರ್ಶನ ದೇಶದ ನಾನಾ ಭಾಗಗಳ ಕಲಾವಿದರ ಪ್ರತಿಭೆ ಬೆಳಕಿಗೆ ಬರಲು, ಪ್ರೋತ್ಸಾಹ, ಪುರಸ್ಕಾರ ಪಡೆಯಲು ಅವಕಾಶ ಮಾಡಿಕೊಡುತ್ತಿದೆ. ಕಲೆಗೆ ಸಂಬಂಧಿಸಿದ ಗ್ರಂಥಗಳ ಪ್ರಕಟಣೆಯಲ್ಲೂ, ಅತ್ಯುತ್ತಮ ಕಲಾಕೃತಿಗಳ ಪ್ರತಿಗಳನ್ನು ಮುದ್ರಿಸಿ ಸಾಮಾನ್ಯರಿಗೆ ತಲಪಿಸುವ ಕೆಲಸದಲ್ಲೂ ಅಕಾಡೆಮಿ ಕಾರ್ಯ ಪ್ರವೃತ್ತವಾಗಿ ಗಮನಾರ್ಹ ಕೆಲಸ ಮಾಡಿದೆ. ಕಲೆಯ ದೃಷ್ಟಿಯಿಂದ ಶ್ರೀಮಂತವಾಗಿರುವ ದೇಶದ ಹಲವಾರು ಪುರಾತನ ಭಿತ್ತಿಚಿತ್ರಗಳ ಪ್ರತಿ ಮಾಡಿಸಲಾಗಿದೆ. ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಪ್ರದರ್ಶನ ನಡೆಸಲು ವ್ಯವಸ್ಥೆ ಮಾಡಿಕೊಳ್ಳುವ ಕಲಾವಿದರಿಗೆ, ಪ್ರಯಾಣಕ್ಕಾಗಿ ಆರ್ಥಿಕ ಸಹಾಯ ನೀಡುವ ವ್ಯವಸ್ಥೆಯಿದೆ. ಮಾಡಬಹುದಾದ, ಮಾಡಬೇಕಾದ ಕೆಲಸ ಇನ್ನೂ



ಹೆಬ್ಬಾರರಿಗೆ ತೋಟಗಾರಿಕೆಯಲ್ಲೂ ಆಸೆ. ಮನೆ ಸುತ್ತಲೂ ನಾನಾ ತರದ ಹೂವಿನ ಗಿಡ ಬಳ್ಳಿಗಳನ್ನು ಬೆಳೆಸಿದ್ದಾರೆ. ನೀರ ಹಲಸು, ಕರಿಬೇವು ಹಾಗೂ ಲವಂಗಿ ಮೆಣಸಿನ ಗಿಡಗಳೂ ಸೊಂಪಾಗಿ ಬೆಳೆದಿವೆ.

ಇದೆ, ನಿಜ. ಆದರೆ ಈ ತನಕ ಮಾಡಿರುವ ಕೆಲಸದ ಬಗ್ಗೆ ನನಗೆ ಅಸಮಾಧಾನವಿಲ್ಲ. ಹೀಗೆಯೇ ದೇಶದ ಬೇರೆ ಬೇರೆ ರಾಜ್ಯಗಳ ಅಕಾಡೆಮಿಗಳೂ ಇಂಥ ಕೆಲಸಗಳಲ್ಲಿ ತೊಡಗಿ ಪ್ರಾದೇಶಿಕ ಕಲಾವಿದರಿಗೆ ಪ್ರೋತ್ಸಾಹ ಕೊಡುತ್ತಿವೆ.

● ಕಲಾವಿದರಿಗೆ ಪ್ರೋತ್ಸಾಹ ಕೊಡುವ ವಿಚಾರ ನಿಮ್ಮ ಖಚಿತ ಅಭಿಪ್ರಾಯವೇನು? ಈ ಪ್ರೋತ್ಸಾಹ ಯಾವ ರೀತಿಯದಿರಬೇಕು?

— ಕಲಾವಿದರು ಭಿಕ್ಷುಕರೇನಲ್ಲ. ಅವರಿಗೆ ದೊರಕಬೇಕಾದ ಪ್ರೋತ್ಸಾಹದಲ್ಲಿ ಮುಖ್ಯವಾದದ್ದು ಅವರ ಸೃಜನಕ್ರಿಯೆಯನ್ನು ಪೋಷಿಸುವಂಥ ಸಾಮಾಜಿಕ ಸಂದರ್ಭ. ಚಿತ್ರಗಳನ್ನು ಪ್ರದರ್ಶಿಸಲು ಸಾಕಷ್ಟು ಪ್ರದರ್ಶನಾವಕಾಶ. ಹಾಗೆಯೇ ದೇಶದ ಇತರ ಭಾಗಗಳ ಹಾಗೂ ಬೇರೆ ಬೇರೆ ದೇಶಗಳಲ್ಲಿರುವ ಚಿತ್ರ ಶೈಲಿಗಳ ಕುರಿತ ತಿಳಿವಳಿಕೆ ಬರುವಂಥ ಅವಕಾಶ ಮಾಡಿಕೊಡುವುದೂ ಒಂದು ರೀತಿಯ ಪ್ರೋತ್ಸಾಹವಾಗುತ್ತದೆ. ಹಿಂದೆ ನಮ್ಮ ಕಲಾವಿದರಿಗೆ ಪರದೇಶಗಳಲ್ಲಿ ಪ್ರದರ್ಶನಾವಕಾಶ ಕಷ್ಟಸಾಧ್ಯವಾಗಿತ್ತು. ಈಗ ವೆನಿಸ್, ಪ್ಯಾರಿಸ್ ಮುಂತಾದ ಕಡೆಗಳಲ್ಲಿ ಜರಗುವ ದ್ವಿವಾರ್ಷಿಕ ಕಲಾ ಪ್ರದರ್ಶನಗಳಲ್ಲಿ ನಮ್ಮ ಕಲಾವಿದರಿಗೆ ಭಾಗವಹಿಸುವ ಸಾಧ್ಯತೆಯಿದೆ. ಅಕಾಡೆಮಿ ಇಂಥ ಕಲಾಪ್ರದರ್ಶನಗಳಿಗಾಗಿ ಚಿತ್ರಗಳ ಆಯ್ಕೆ ಮಾಡುತ್ತಿದೆ, ಬಹುಮಾನಗಳನ್ನು ಕೊಡುತ್ತಿದೆ. ಇವೆಲ್ಲ ಪ್ರೋತ್ಸಾಹದ ಕೆಲವು ಮಾದರಿಗಳು.

ಕಲಾ ಶಿಕ್ಷಣ

● ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ, ಕಲಾಶಾಲೆಗಳಲ್ಲಿ, ಚಿತ್ರಕಲೆಯ ಕುರಿತು ಕೊಡುವ ಶಿಕ್ಷಣ ತೃಪ್ತಿಕರವಾಗಿದೆಯೆ? ಇದು ಸಾಕೆ? ಏನಾದರೂ ಸುಧಾರಣೆ ಅಪೇಕ್ಷಣೀಯವೆ?

— ವಿಶ್ವವಿದ್ಯಾನಿಲಯಗಳ ಕುರಿತು ನಾನೇನೂ ಹೇಳಲಾರೆ. ಆದರೆ ನಮ್ಮ ಕಲಾಶಾಲೆಯಲ್ಲಿ ಕೊಡುವ ಶಿಕ್ಷಣ ತೃಪ್ತಿಕರವಲ್ಲ ಎನ್ನುವುದು ಸರಿಯಲ್ಲ. ಶಿಕ್ಷಣ ಕ್ರಮ ಸರಿಯಾಗಿದೆ. ಆದರೆ ವಿದ್ಯಾರ್ಥಿಗಳ ಸೃಜನಶೀಲ ಪ್ರತಿಭೆ ಹೊರಗೆ ಬರಲು ಪ್ರೋತ್ಸಾಹ ಕೊಡುವಂಥ ಶಿಕ್ಷಕರ ಅಗತ್ಯ ತುಂಬಾ ಇದೆ. ಶಬ್ದಗಳಿಂದಲ್ಲ, ತಮ್ಮ ಕೃತಿಗಳಿಂದ ವಿದ್ಯಾರ್ಥಿಗಳಿಗೆ ಸ್ಫೂರ್ತಿ ಕೊಡುವಂಥ ಶಿಕ್ಷಕರ ಅಗತ್ಯವಿದೆ. ಹಾಗೆಯೇ ಸಾರ್ವತ್ರಿಕವಾಗಿ ಎಲ್ಲರ ಸೌಂದರ್ಯ ಪ್ರಜ್ಞೆ ಜಾಗೃತವಾಗುವಂಥ ಶಿಕ್ಷಣ ಕ್ರಮ, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲೆ ಸೇರಿಕೊಂಡರೆ ಒಳ್ಳೆಯದು.

● ಭಾರತೀಯ ಸಂಸ್ಕಾರವನ್ನು ರೂಢಿಸಿಕೊಂಡ ಭಾರತೀಯ ಮಹಿಳೆಯ ಸೌಂದರ್ಯದೃಷ್ಟಿ ವಿಶಿಷ್ಟವಾದದ್ದು ಎಂದು ನೀವು ಒಪ್ಪುವಿರಾ? ಆದರೆ ಆಧುನಿಕ ಭಾರತೀಯ ಚಿತ್ರಕಲೆಯ ಕ್ಷೇತ್ರದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಮಹಿಳೆಯರು ಕಾಣಿಸುತ್ತಿಲ್ಲ. ಇದಕ್ಕೆ ಕಾರಣವೇನಿರಬಹುದು?

— ಭಾರತೀಯ ಸಂಸ್ಕಾರಗಳನ್ನು ರೂಢಿಸಿಕೊಂಡ ಭಾರತೀಯ ಮಹಿಳೆಯ ಸೌಂದರ್ಯ ದೃಷ್ಟಿ ವಿಶಿಷ್ಟವಾದದ್ದು ನಿಜ. ಆದರೆ ಈಗ ಏನಾಗುತ್ತಿದೆ ಹೇಳಿ. ಮನೆಯನ್ನು ಸಿಂಗರಿಸುವಾಗಲೂ ನಾವು ಅನುಕರಣೆಯಲ್ಲೆ ತೃಪ್ತರಾಗುವುದಿದೆ. ಎಲ್ಲ ಕೆಲಸಗಳಿಗೂ ಹಾಡುವ ರೂಢಿ ಇರಿಸಿಕೊಂಡಿದ್ದ ನಾವು ಹಾಡುವುದನ್ನು ಬಿಟ್ಟಿದ್ದೇವೆ. ಎಲ್ಲ ಹೆಣ್ಣುಮಕ್ಕಳ ಸಂಸ್ಕಾರವನ್ನು ಪ್ರತಿಬಿಂಬಿಸುವಂತಿದ್ದ ರಂಗೋಲಿ ಆಸಕ್ತರಿಗಷ್ಟೆ ಸೀಮಿತವಾಗುತ್ತಿದೆ. ಅದರಲ್ಲೂ ಸೃಜನಶೀಲತೆಯಿಲ್ಲ. ಸಲಕರಣೆಗಳ ಸಹಾಯ ಪಡೆಯಲಾಗುತ್ತಿದೆ. ನಮ್ಮ ಸಾಮಾಜಿಕ ಪರಿವರ್ತನೆಯನ್ನು ಪ್ರಭಾವಿಸುತ್ತಿರುವ ಶಕ್ತಿಗಳ ಮುಂದೆ ಸೌಂದರ್ಯ ಪ್ರಜ್ಞೆ ಕುಸಿಯುತ್ತಿದೆಯೆಂಬ ಕಳವಳ ನನಗಿದೆ. ಆದರೆ ಇದಕ್ಕೆ ಜನಸಾಮಾನ್ಯರನ್ನು ದೂರಿ ಫಲವಿಲ್ಲ. ಅವರ ಸೌಂದರ್ಯಪ್ರಜ್ಞೆ ಕುದುರುವಂಥ, ಅವರು ಎಲ್ಲ ಲಲಿತಕಲೆಗಳ ಕುರಿತು ಆಸಕ್ತಿ ವಹಿಸುವಂಥ ಪರಿಸರವನ್ನು ನಿರ್ಮಿಸುವುದರಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆ ಮಾಡಬಹುದಾಗಿದ್ದ ಕೆಲಸವನ್ನು ಮಾಡಿಲ್ಲವೆಂದು ಈ ಪರಿಸ್ಥಿತಿಯಿದೆ.

> **"ನಮ್ಮ ಸಮಾಜದಲ್ಲಿ ಗಂಡಿಗೇ ಪ್ರಾಧಾನ್ಯ. ಪ್ರಚಾರ ಸಿಗುವಾಗ, ಇಂಥವರಿಗೆ ಸಿಗಬೇಕಾದಷ್ಟು ಅವಕಾಶ, ಪ್ರಚಾರ ಸಿಕ್ಕಿಲ್ಲ. ಸೃಜನಶೀಲ ಚಿತ್ರಕಲೆಯ ಕ್ಷೇತ್ರದಲ್ಲಿ ಮಹಿಳೆ ಕೂಡ ಗಂಡಸಿನಷ್ಟೆ ಸಮರ್ಥಳು."**

ಇನ್ನು ಮಹಿಳೆಯರು ಗಮನಾರ್ಹ ಪ್ರಮಾಣದಲ್ಲಿ ಈ ಕ್ಷೇತ್ರದಲ್ಲಿ ಕಾಣಿಸುತ್ತಿಲ್ಲವೆಂದಿದ್ದೀರಿ. ಈ ಮಾತು ಪೂರ್ತಿ ಸತ್ಯವಲ್ಲ. ಅತ್ಯಂತ ಪ್ರತಿಭಾನ್ವಿತ ಮಹಿಳೆಯರು ನಮ್ಮ ಚಿತ್ರಕಲೆ, ಶಿಲ್ಪ ಹಾಗೂ ಇನ್ನಿತರ ಲಲಿತಕಲೆಗಳ ಕ್ಷೇತ್ರಗಳಲ್ಲಿ ಕಾಣಸಿಗುತ್ತಾರೆ. ಆದರೆ ನಮ್ಮ ಸಮಾಜದಲ್ಲಿ ಗಂಡಿಗೇ ಪ್ರಾಧಾನ್ಯ. ಪ್ರಚಾರ ಸಿಗುವಾಗ, ಇಂಥವರಿಗೆ ಸಿಗಬೇಕಾದಷ್ಟು ಅವಕಾಶ, ಪ್ರಚಾರ ಸಿಕ್ಕಿಲ್ಲ. ಸೃಜನಶೀಲ ಚಿತ್ರಕಲೆಯ ಕ್ಷೇತ್ರದಲ್ಲಿ ಮಹಿಳೆ ಕೂಡ ಗಂಡಸಿನಷ್ಟೇ ಸಮರ್ಥಳು.

● ಮೂರು ವರ್ಷ ಕಾಲ ನೀವು ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದಿರಿ. ನಿಮ್ಮ ಅಧ್ಯಕ್ಷತೆಯ ಅನುಭವ ಸಿಹಿಯಾಗಿತ್ತೇ, ಕಹಿಯಾಗಿತ್ತೇ? ನಿಮ್ಮ ಅಧಿಕಾರಾವಧಿಯಲ್ಲಿ ನಡೆದ ಕೆಲಸಗಳ ಬಗ್ಗೆ ತುಸು ಹೇಳುವಿರಾ?

— ನನ್ನ ಅನುಭವ ಸಿಹಿಯಾಗಿತ್ತು. ನನ್ನ ಕಾರ್ಯಾವಧಿಯಲ್ಲಿ ಕೆಲವಾರು ಕಲಾವಿದರಿಗೆ ಹೊರಗೇನು ನಡೆಯುತ್ತಿದೆ ಎಂಬ ತಿಳಿವಳಿಕೆ ಮೂಡಿಸಲು ಪ್ರಯತ್ನಿಸಿದ್ದೆ. ಇದರ ಪ್ರಯೋಜನವನ್ನು ಹಲವಾರು ತರುಣ ಕಲಾವಿದರು ಪಡೆದಿದ್ದಾರೆ. ಕರ್ನಾಟಕದ ಹೊರಗಿನ ಚಿತ್ರಕಲೆಯ ಕುರಿತ ತಿಳಿವಳಿಕೆ ಹೆಚ್ಚಾಗಿದ್ದು, ಕೆಲವು ತರುಣ ಕಲಾವಿದರು ಕರ್ನಾಟಕದಿಂದ ಹೊರಗೆ ತಮ್ಮ ಪ್ರತಿಭೆಯನ್ನು ಮೆರೆಸಿ ಹೆಸರು ಪಡೆದದ್ದು, ರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿ ಅವರ ಚಿತ್ರ ಪ್ರದರ್ಶನಕ್ಕೆ ಅವಕಾಶ ಮಾಡಿಕೊಟ್ಟು ಅಕಾಡೆಮಿ ಧನಸಹಾಯ ಮಾಡಿದ್ದು, ಇದೆಲ್ಲ ನನ್ನ ಕಾರ್ಯಾವಧಿಯಲ್ಲಿ ನಡೆದ ಕೆಲವು ಕೆಲಸಗಳು. ಚಿತ್ರಕಲೆಯ ಪರಿಚಯ ಸಾಮಾನ್ಯನಿಗೂ ಆಗಬೇಕು, ಹಳ್ಳಿಹಳ್ಳಿಗಳಲ್ಲಿಯೂ ಇಂಥ ಚಿತ್ರ ಪ್ರದರ್ಶನಗಳ ಕುರಿತು ಆಸಕ್ತಿ ಬೆಳೆಯಬೇಕು ಎನ್ನುವ ಉದ್ದೇಶದಿಂದ ಒಂದು ವ್ಯಾನ್ ಕೊಂಡು ಕೊಂಡು ಸಂಚಾರೀ ಚಿತ್ರ ಪ್ರದರ್ಶನದ ವ್ಯವಸ್ಥೆ ಮಾಡಬೇಕು ಎಂದು ಯೋಚಿಸಿಕೊಂಡಿದ್ದೆ. ಈ ವ್ಯಾನ್‌ನಲ್ಲಿ ಎಲ್ಲ ಕಲಾವಿದರ ಉತ್ತಮ ಚಿತ್ರಗಳನ್ನು ಹಳ್ಳಿಹಳ್ಳಿಗೂ ಕೊಂಡೊಯ್ದು, ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ, ರಜಾದಿನಗಳಲ್ಲಿ ಒಂದೊಂದು ದಿನದ ಚಿತ್ರ ಪ್ರದರ್ಶನಗಳನ್ನು ಏರ್ಪಡಿಸುವ ಯೋಚನೆಯಿತ್ತು. ಆದರೆ ನನ್ನ ಕಾರ್ಯಾವಧಿಯಲ್ಲೆ ಇದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಿಲ್ಲ. ●



ನಾಗಮಂಡಲದ ವರ್ತಕರು